ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 8 ಸಂಚಿಕೆ 31 ಅಗಸ್ಟ್ ೩, 1986 ಬೆಲೆ 80 ಪೈಸೆ.

ಅಗೆಸ್ಟ್ 9 ರಂದು ಭಾವೈಕ್ಯತಾ ದಿನಾಚರಣೆ

ಸಾಮ್ರಾಜ್ಯಶಾಹಿಗಳ ಕೈವಾಡದಿಂದ ಪ್ರೇರೇಪಿಸಲ್ಪಟ್ಟ ಛಿದ್ರಕಾರಿ, ಜಾತೀಯವಾದಿ ಶಕ್ತಿಗಳು, ದೇಶದ ಐಕ್ಯತೆಗೆ ಭಂಗ ಉಂಟುಮಾಡುತ್ತಿದ್ದಾರೆ ದೇಶದ ಸಮಗ್ರತೆ ಗಂಡಾಂತರದಲ್ಲಿದೆ. ಈ ಒಳಸಂಚನ್ನು ಬಯಲಿಗೆಳೆಯುವ ಸಲುವಾಗಿ, ಜನರನ್ನು ಒಂದುಗೂಡಿಸಲು 9-8-86 ರಂದು "ರಾಷ್ಟ್ರೀಯ ಭಾವೈಕ್ಯ ದಿನ"ವನ್ನಾಗಿ ಆಚರಿಸಬೇಕೆಂದು 10 ಕೇಂದ್ರೀಯ ಕಾರ್ಮಿಕ ಸಂಘಗಳು ಕರೆಕೊಟ್ಟಿವೆ. ಅದನ್ನು ಯಶಸ್ವಿಗೊಳಿಸಿರಿ. ದೇಶದ ಐಕ್ಯತೆಯನ್ನು ಉಳಿಸಿರಿ. ಸಾಮ್ರಾಜ್ಯಶಾಹಿ ಒಳಸಂಚನ್ನು ಬಯಲಿಗೆಳೆಯಿರಿ.

ಕೋಮು ಗಲಭೆಗಳ ಹಿಂದೆ ಸಾಮ್ರಾಜ್ಯಶಾಹಿ ಪಿತೂರಿ —ಬಿ. ಟಿ. ರಣದಿವೆ

"ಇತ್ತೀಚೆಗಿನ ದಿನಗಳಲ್ಲಿ ನಮ್ಮ ದೇಶದ ವಿವಿಡೆಡೆ ಭುಗಿಲೆದ್ದಿರುವ ಕೋಮುವಾರು ಗಲಭೆಗಳು ಕೇವಲ ಯಾವುದೇ ಧರ್ಮದ ಅನುಯಾಯಿಗಳ ನಡುವೆ ನಡೆಯುತ್ತಿರುವ ಸಾಮಾನ್ಯ ಕಚ್ಚಾಟ ಅಲ್ಲ; ಇಂತಹ ಗಲಭೆಗಳ ಹಿಂದೆ ಸಾಮ್ರಾಜ್ಯಶಾಹಿಗಳ ಸುವ್ಯವಸ್ಥಿತವಾದ ಪಿತೂರಿ ಇದೆ. ಭಾರತದ ಐಕ್ಯತೆಯನ್ನು ನುಚ್ಚುನೂರಾಗಿಸುವ ಉದ್ದೇಶವನ್ನು ಹೊಂದಿರುವ ಅಮೇರಿಕನ್ ಸಾಮ್ರಾಜ್ಯಶಾಹಿ ಈ ಕೋಮುವಾದಿ ಮತ್ತು ಛಿದ್ರಕಾರಿ ಶಕ್ತಿಗಳ ಹಿಂದೆ ನಿಂತು ಗಲಭೆಗಳಿಗೆ ಪ್ರೇರೇಪಣೆ ನೀಡುತ್ತಿವೆ." ಎಂಬುದಾಗಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಪಾಲಿಟ್ ಬ್ಯೂರೋ ಸದಸ್ಯ ಕಾ. ಬಿ. ಟಿ. ರಣದಿವೆ ತಿಳಿಸಿದ್ದಾರೆ. ಜುಲೈ 29 ರಂದು ಬೆಂಗಳೂರಿನ ಪುರಭವನದಲ್ಲಿ ಸಿ. ಪಿ. ಐ. (ಎಂ) ಬೆಂಗಳೂರು ಜಿಲ್ಲಾ ಸಮಿತಿ ಏರ್ಪಡಿಸಿದ್ದ ಬೃಹತ್ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಸಾಮ್ರಾಜ್ಯಶಾಹಿಗೆ ತೆರೆದ ಹೆಬ್ಬಾಗಿಲು

ಕೇಂದ್ರದ ರಾಜೀವ ಗಾಂಧಿ ಸರಕಾರ ಅನುಸರಿಸುತ್ತಿರುವ ಹೊಸ ಆರ್ಥಿಕ ನೀತಿ ವಿದೇಶಿ ಬಂಡವಾಳಶಾಹಿಗಳಿಗೆ, ಬಹುರಾಷ್ಟ್ರೀಯ ಕಂಪನಿಗಳಿಗೆ ಮತ್ತು ಸಾಮ್ರಾಜ್ಯಶಾಹಿಯ ಏಜೆಂಟರುಗಳ ಪ್ರವೇಶಕ್ಕೆ ಮುಕ್ತದ್ವಾರ ಕಲ್ಪಿಸಿಕೊಟ್ಟಿದೆ. ಆಮದು ನೀತಿಯನ್ನು ಎಷ್ಟು ಸಡಿಲಿಸಲಾಗಿದೆಯೆಂದರೆ ದೇಶದ ಉದ್ದಿಮೆಗಳ ಬೆಳವಣಿಗೆಗೆ ಮೂಲಾಧಾರವಾಗಿರುವ ಬಂಡವಾಳ ಸಾಮಗ್ರಿಗಳನ್ನೂ ಸಹ ಸರಕಾರ ಆಮದು ಮಾಡಿಕೊಳ್ಳುತ್ತಿದೆ. ಇವುಗಳಲ್ಲಿ ಯಂತ್ರಸ್ಥಾವರಗಳಿಗೆ ಬೇಕಾದ ಸಾಮಗ್ರಿ ಮತ್ತು ಜವಳಿ ಕೈಗಾರಿಕೆಯ ಯಂತ್ರಗಳೂ ಸೇರಿವೆ. ಇಂತಹ ಬಂಡವಾಳ ಸಾಮಗ್ರಿಗಳನ್ನು ಉತ್ಪಾದಿಸುತ್ತಿರುವ ನಮ್ಮ ದೇಶೀಯ ಉದ್ದಿಮೆಗಳು ಬಹುರಾಷ್ಟ್ರೀಯ ಕಂಪನಿಗಳ ಹೊಡೆತ ತಾಳಲಾರದೆ ನರಳುತ್ತಿವೆ.

"ಸರಕಾರ ನೀಡಿದ ಇತ್ತೀಚೆಗಿನ ಹೇಳಿಕೆ ಪ್ರಕಾರ ಸರಕಾರವು ಜಂಟಿ ಕ್ಷೇತ್ರದಲ್ಲಿ ಸಂಸ್ಥೆಯೊಂದನ್ನು ಸ್ಥಾಪಿಸಲಿದೆ. ಈ ಸಂಸ್ಥೆಯ ಶೇ. 49ರಷ್ಟು ಪಾಲು ಬಂಡವಾಳ ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳ ಕೈಯ್ಯಲ್ಲೂ ಉಳಿದ ಶೇ. 51 ರಷ್ಟು ಪಾಲು ಬಂಡವಾಳ ವಿದೇಶದಲ್ಲಿ ನೆಲೆಸಿರುವ ಭಾರತೀಯ ಬಂಡವಾಳಗಾರರ ಕೈಯಲ್ಲೂ ಇರಬೇಕಂತೆ. ಭಾರತವನ್ನು ತೊರೆದು ವಿದೇಶವಲ್ಲಿ ನೆಲೆಸಿರುವ, ವಿದೇಶಿ ಬಹುರಾಷ್ಟ್ರೀಯ ಕಂಪನಿಗಳ ಏಜೆಂಟರಾಗಿರುವ ಮಂದಿ ಈ ಜನ. ಅಷ್ಟು ಸಾಲದೆಂಬಂತೆ ದೇಶದ ಸಾರ್ವಜನಿಕ ಕ್ಷೇತ್ರದ ಎಲ್ಲ ಉದ್ದಿಮೆಗಳ ನಿಯಂತ್ರಣ ಮತ್ತು ಸಮಸ್ತ ಆಗುಹೋಗುಗಳ ಮೇಲ್ವಿಚಾರಣೆ ವಿದೇಶೀ ಬಂಡವಾಳಗಾರರ ಕೈಗೊಂಬೆಯಾಗಿರುವ ಈ ಜಂಟಿ ಕ್ಷೇತ್ರದ ಸಂಸ್ಥೆಯ ಕೈಯಲ್ಲಿರಬೇಕಂತೆ! ಅರ್ಥಾತ್, ನಮ್ಮ ದೇಶದ ಸಾರ್ವಜನಿಕ ಕ್ಷೇತ್ರದ ಜುಟ್ಟು ವಿದೇಶೀ ಬಂಡವಾಳಗಾರರು ಮತ್ತು ಬಹುರಾಷ್ಟ್ರೀಯ ಕಂಪನಿಗಳ ಕೈಯ್ಯಲ್ಲಿರುತ್ತದೆ" ಎಂದು ಹೇಳಿ ಅಂಥ ಕೆಲಸವನ್ನು ಈ ಹಿಂದೆ ಜವಹರಲಾಲ್ ನೆಹರೂರವರಾಗಲಿ ಇಂದಿರಾಗಾಂಧಿಯಾಗಲಿ ಮಾಡಿರಲಿಲ್ಲ ಎಂದರು.

(ಎಂಟನೇ ಪುಟ ನೋಡಿ)

ಸಿ. ಪಿ. ಐ. (ಎಂ) ಕರ್ನಾಟಕ ರಾಜ್ಯ ಸಮಿತಿ ಸಭೆ

ಜುಲೈ 29-30 ರಂದು ಸಿ. ಪಿ. ಐ. (ಎಂ) ಕರ್ನಾಟಕ ರಾಜ್ಯ ಸಮಿತಿ ಸಭೆಯಲ್ಲಿ ಪಾಲಿಟ್ ಬ್ಯೂರೋ ಸದಸ್ಯರಾದ ಕಾ. ಬಿ. ಟಿ. ರಣದಿವೆಯವರು ಸಮತಾವಾದಿ ದೇಶಗಳಲ್ಲಿ ಆರ್ಥಿಕ ಬೆಳವಣಿಗೆಗಳ ಕುರಿತು ವಿವರಿಸುತ್ತಾ, ಸಮತಾವಾದಿ ಕ್ರಾಂತಿಯ ನಂತರ ಸೋವಿಯತ್ ರಶ್ಯಾ, ಪೂರ್ವ ಜರ್ಮನಿ ಮೊದಲಾದ ದೇಶಗಳಲ್ಲಿ ನಿರುದ್ಯೋಗ ಸಮಸ್ಯೆಯಾಗಲೀ, ಉತ್ಪಾದನಾ ಸಮಸ್ಯೆಯಾಗಲೀ ಇಲ್ಲೆಂದೂ, ಆದರೆ ಸಾಮ್ರಾಜ್ಯಶಾಹಿಗಳ ಯುದ್ಧ ಸಿದ್ಧತೆ ಸಮತಾವಾದಿ ದೇಶಗಳ ಆದಾಯದಲ್ಲಿಯ ಹೆಚ್ಚಿನಂಶವನ್ನು ಯುದ್ಧ ತಯಾರಿಗೆ ವ್ಯಯ ಮಾಡಬೇಕಾಗಿರುವುದರಿಂದ ಸ್ವಲ್ಪ ಸಮಸ್ಯೆ ಉಂಟಾಗಿದೆಂದೂ, ಆ ಕಾರಣದಿಂದಲೇ ಸಂಪನ್ಮೂಲಗಳ ಸಂಪೂರ್ಣ ಉಪಯೋಗಕ್ಕೆ ಬೇಕಾದ ಯೋಜನೆಗಳನ್ನು ಮೊನ್ನೆ ನಡೆದ ಪಕ್ಷದ ಸಮ್ಮೇಳನಗಳಲ್ಲಿ ರೂಪಿಸಲಾಗಿದೆಂದೂ ವಿವರಿಸಿದರು.

ನಮ್ಮ ದೇಶದಲ್ಲಿ ಸರ್ವಾಧಿಕಾರಿ ಶಕ್ತಿ ಬೆಳೆಯುತ್ತಿದೆ, ಆರ್ಥಿಕ ಬಿಕ್ಕಟ್ಟು ಭೀಕರವಾಗಿದೆ. ರಾಜೀವ್ ಸರಕಾರ ಅಮೇರಿಕ-ಇಂಗ್ಲೆಂಡ್‌ಗಳೊಡನೆ ರಕ್ಷಣಾ ಒಪ್ಪಂದ ಮಾಡಿಕೊಂಡು, ಅಮೇರಿಕನ್ ಸಾಮ್ರಾಜ್ಯಶಾಹಿಗಳಿಗೆ ನಮ್ಮ ರಕ್ಷಣಾ ಸಾಧನೆಗಳ, ಯಂತ್ರಗಳ ಪೂರ್ಣ ಮಾಹಿತಿ ನೀಡುತ್ತಿರುವುದು ಅಪಾಯಕಾರಿ. ಅಮೇರಿಕದ ಏಜಂಟರು ಅತಿ ಮಹತ್ವದ ನಕಾಶೆ, ಕಾಗದ ಪತ್ರಗಳನ್ನು ಕಳವು ಮಾಡುತ್ತಿದ್ದಾರೆ. ಅದರ ವಿರುದ್ಧ ಹೋರಾಟ ಅಗತ್ಯವೆಂದು ಹೇಳಿದರು.

ನಮ್ಮ ದೇಶದಲ್ಲಿ ಸಾಮ್ರಾಜ್ಯಶಾಹಿ ಶಕ್ತಿಗಳು ನೇರ ಪ್ರವೇಶ ಮಾಡಿವೆಂದು ಕಲ್ಕತ್ತಾ ಕಾಂಗ್ರೆಸ್ಸಿನಲ್ಲಿ ಸ್ಪಷ್ಟಪಡಿಸಿದ್ದೇವೆಂದೂ ಆದರೆ ಆಳುವ ಪಕ್ಷ ಅವುಗಳನ್ನೆದುರಿಸದೆ, ಅವುಗಳಿಗೆ ಶರಣಾಗುತ್ತಿದೆಂದೂ, ವಿರೋಧ ಪಕ್ಷಗಳೂ ಕೂಡ ಛಿದ್ರಕಾರಿಗಳನ್ನೆದುರಿಸುವುದರಲ್ಲಿ ವಿಫಲಗೊಂಡಿವೆಂದೂ ಸಿ. ಪಿ. ಐ (ಎಂ) ಮತ್ತು ಸಿ. ಪಿ. ಐ. ಪಕ್ಷಗಳು ಮಾತ್ರ ಅವುಗಳನ್ನೆದುರಿಸುತ್ತಿವೆಂದೂ ಹೇಳಿದರು. ಜಾತೀಯ ಸೌಹಾರ್ದತೆಯನ್ನು ಕಾಪಾಡುವ ಜವಾಬ್ದಾರಿ ಕಾರ್ಮಿಕ ವರ್ಗದ ಮೇಲಿದೆಯಲ್ಲದೆ, ಬಂಡವಾಳಶಾಹಿ ಶಕ್ತಿಗಳ ಮೇಲಿಲ್ಲವೆಂದು ಹೇಳಿದರು.

ಪ. ಬಂಗಾಲದ ನಗರ ಸಭೆ ಚುನಾವಣೆಗಳ ಕುರಿತು ವಿಶ್ಲೇಷಿಸುತ್ತಾ, ಅಲ್ಲಿ ಮುಸಲ್ಮಾನರು ಹಿಂದುಳಿದವರಲ್ಲ ಸಿ.ಪಿ.ಐ.(ಎಂ)ಗೆ ಮತನೀಡಿದ್ದಾರೆಂದು ಸ್ಪಷ್ಟಪಡಿಸಿದರು.

ಭಾಷೆ ಸಮಸ್ಯೆ ಕುರಿತು ಪಕ್ಷದ ನಿಲುವೆಯನ್ನು ಸ್ಪಷ್ಟಪಡಿಸಿ, ಜನರ ಮಧ್ಯೆ ಅದರ ಪ್ರಚಾರ ನಡೆಸಬೇಕೆಂದರು.

ರಾಷ್ಟ್ರೀಯ ಐಕ್ಯತಾ ದಿನಾಚರಣೆಯನ್ನು ಯಶಸ್ವಿಗೊಳಿಸಬೇಕೆಂದರು.

ಎಸ್. ಕೆ. ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಸಮಿತಿ ಸಭೆ ಕಾರ್ಯದರ್ಶಿಯವರು ಮಂಡಿಸಿದ ವರದಿಯ ಮೇಲೆ ಚರ್ಚೆ ನಡೆಸಿ ಪಕ್ಷವನ್ನು ಬಲಪಡಿಸುವ ಹಲವಾರು ನಿರ್ಣಯಗಳನ್ನು ಕೈಗೊಂಡಿತು.

ಆಗಸ್ಟ್ 8 ರಂದು ಉದ್ಯೋಗ ವಿನಿಮಯ ಕೇಂದ್ರಗಳ ಮುಂದೆ ಸಾಮೂಹಿಕ ಧರಣಿ

ಸಿ. ನಂಜುಂಡಪ್ಪ

ಕಲ್ಕತ್ತದಲ್ಲಿ 1986 ಮಾರ್ಚ್ 31 ರಿಂದ ಏಪ್ರಿಲ್ 2 ರವರೆಗೆ ನಡೆದ ಸಿ.ಐ.ಟಿ.ಯು ಜನರಲ್ ಕೌನ್ಸಿಲ್ ಸಭೆಯು ಅಂಗೀಕರಿಸಿದ ಒಂದು ನಿರ್ಣಯದಲ್ಲಿ ಬೆಳೆಯುತ್ತಿರುವ ನಿರುದ್ಯೋಗದ ಬಗ್ಗೆ ತೀವ್ರ ಕಳವಳವನ್ನು ವ್ಯಕ್ತಪಡಿಸಿ, ಮೇ ದಿನ ಶತಮಾನೋತ್ಸವದ ಈ ವರ್ಷ ಸಿ.ಐ.ಟಿ.ಯು ಸಂಘಗಳು ನಿರುದ್ಯೋಗಿಗಳ ಬೇಡಿಕೆಗಳಿಗಾಗಿ ಚಳುವಳಿ ನಡೆಸಲು ಒಂದು ದಿವಸವನ್ನು ವಿನಿಯೋಗಿಸಲು ಕರೆ ಕೊಟ್ಟಿತು. ಈ ಕರೆಯನ್ನು ಪರಿಗಣಿಸಿ 1986 ಏಪ್ರಿಲ್ 10 ರಂದು ಬೆಂಗಳೂರಿನಲ್ಲಿ ನಡೆದ ಸಿ.ಐ.ಟಿ.ಯು ಕರ್ನಾಟಕ ರಾಜ್ಯ ಸಮಾವೇಶವನ್ನು ನಡೆಸಲು ನಿರ್ಧರಿಸಿತು.

ಆ ಸಮಾವೇಶವು ಆಗಸ್ಟ್ 8ರಂದು ರಾಜ್ಯಾದ್ಯಂತ ಉದ್ಯೋಗ ವಿನಿಮಯ ಕಛೇರಿಗಳ ಮುಂದೆ ಕೆಳಕಂಡ ಬೇಡಿಕೆಗಳಿಗಾಗಿ ಸಾಮೂಹಿಕ ಧರಣಿಯನ್ನು ನಡೆಸಲು ಕರೆ ಕೊಟ್ಟಿದೆ. ಕೆಲಸದ ಹಕ್ಕನ್ನು ಮೂಲಭೂತ ಹಕ್ಕೆಂದು ಸಂವಿಧಾನದಲ್ಲಿ ಸೇರಿಸಬೇಕು; ಉದ್ಯೋಗ ಸಿಕ್ಕುವತನಕ ನಿರುದ್ಯೋಗ ಭತ್ಯೆಯನ್ನು ಕೊಡಬೇಕು; ನಿರುದ್ಯೋಗವನ್ನುಂಟು ಮಾಡುವ ಸ್ವಯಂಚಾಲೀಕರಣ, ಗಣಕೀಕರಣಗಳನ್ನು ತಡೆಯಬೇಕು; ಖಾಲಿ ಹುದ್ದೆಗಳನ್ನು ತುಂಬುವುದರ ಮೇಲೆ ಮತ್ತು ಹೊಸಬರನ್ನು ಕೆಲಸಕ್ಕೆ ನೇಮಿಸಿಕೊಳ್ಳುವುದರ ಮೇಲೆ ಕೇಂದ್ರ ಸರ್ಕಾರವು ಹಾಕಿರುವ

(ಎಂಟನೆಯ ಪುಟ ನೋಡಿ)

ವಾಕ್ ಸ್ವಾತಂತ್ರ್ಯದ ರಕ್ಷಕರಿವರು !

ಸಿ.ಪಿ.ಐ (ಎಂ) ನ ಕೇರಳ ರಾಜ್ಯ ಸಮಿತಿ ಸಭೆ ಇತ್ತೀಚೆಗೆ ಎಂ.ವಿ. ರಾಘವನ್ ವಿರುದ್ಧ ಕೈಗೊಂಡ ಶಿಸ್ತುಕ್ರಮಗಳ ನಂತರ ಕೇರಳದ ಮತ್ತು ರಾಷ್ಟ್ರೀಯ ಬೂರ್ಜ್ವಾ ಪತ್ರಿಕೆಗಳಲ್ಲಿ ಈ ಬಗ್ಗೆ ಬಂದ ವರದಿಗಳು, ಲೇಖನಗಳು ಈ ಪತ್ರಿಕೆಗಳ ವರದಿಗಾರರು/ಪತ್ರಕರ್ತರ ಟೊಳ್ಳುತನವನ್ನು, ಅಜ್ಞಾನವನ್ನು ಹಾಗೂ ಅಪ್ರಮಾಣಿಕತೆಯನ್ನು ಬಯಲಿಗೆಳೆದಿವೆ. ಕೆಲವೇ ಉದಾಹರಣೆಗಳನ್ನು ಇಲ್ಲಿ ಕೊಡುತ್ತಿದ್ದೇವೆ.

"ಇಂಡಿಯಾ ಟುಡೇ"- ಈ ಪತ್ರಿಕೆಯ ಜುಲೈ 15ರ ಸಂಚಿಕೆಯಲ್ಲಿನ ಕೆಲವು ಅಣಿಮುತ್ತುಗಳು:- "ಇ.ಎಂ.ಎಸ್. ಸ್ವತಃ ನಾಯರ್ ಆಗಿದ್ದರೂ, ಎಳವಾಗಳ [ಈಡಿಗರ] ಪಕ್ಷ ಹಿಡಿದರು!" "54 ವಯಸ್ಸಿನ ರಾಘವನ್ ರಾಜ್ಯ ಸಮಿತಿಯ ಅತಿ ಕಿರಿಯ ಸದಸ್ಯರಾಗಿದ್ದರು" ಇ.ಎಂ.ಎಸ್. ನಾಯರ್ ಅಲ್ಲ. ರಾಘವನ್‌ಗಿಂತ ವಯಸ್ಸಿನಲ್ಲಿ ಕಿರಿಯರಾದ ದಶನಿಷ್ಟ (ಹನ್ನೆರಡು) ಸದಸ್ಯರಾದರೂ ರಾಜ್ಯ ಸಮಿತಿಯಲ್ಲಿದ್ದಾರೆ. ಅತ್ಯಂತ ಕಿರಿಯ ಸದಸ್ಯರ ವಯಸ್ಸು 3? ಎನ್ನುವುದು ಅವರಿಗೆ ತಿಳಿದೇ ಇಲ್ಲ !

ಇಷ್ಟೇ ಅಲ್ಲ ಶ್ರೀಧರ ಪಿಳ್ಳೆ ಎಂಬ ಪತ್ರಕರ್ತ ಈ ಪತ್ರಿಕೆಗಳಲ್ಲಿ ಬರೆದ ಲೇಖನದ ಪ್ರಕಾರ "ತಿರುವಾಂಕೂರು" ಪ್ರದೇಶದಿಂದ ಬಂದಿರುವ ಇ.ಎಂ.ಎಸ್. ಅಚ್ಯುತಾನಂದನ್ ಜತೆ ಮಲಬಾರ್ ಗುಂಪಿನ ಮುಖಂಡರು" ! ಮತ್ತು "ಇ.ಕೆ. ನಾಯನಾರ್ ಪರನ್ನು ರಾಘವನ್ ಸಿಲುವಿಗೆ ಬೆಂಬಲಿಸಿದ್ದಕ್ಕೆ ಅವರನ್ನು ಪಾಲಿಟ್ ಬ್ಯೂರೋದಿಂದ ಕೈಬಿಡಲಾಯಿತು.'! ಈ ಮಲೆಯಾಳಿ ಪತ್ರಕರ್ತನಿಗೂ ಇ.ಎಂ.ಎಸ್. ಮಲಬಾರ್ ಪ್ರದೇಶದವರು ಎಂಬುದಾಗಲೀ, ನಾಯನಾರ್ ಎಂದೂ ಪಾಲಿಟ್ ಬ್ಯೂರೋದ ಸದಸ್ಯರಾಗಿರಲಿಲ್ಲ ಎಂಬುದಾಗಲಿ ತಿಳಿದಿಲ್ಲ. ಇಂತಹ ಪ್ರಾಥಮಿಕ ಜ್ಞಾನವೂ ಇಲ್ಲದವರು "ವಿಶ್ಲೇಷಣೆ" ನಡೆಸುತ್ತಾರಂತೆ !

ಟೆಲಿಗ್ರಾಫ್ : ಕಲ್ಕತ್ತೆಯ ಈ ಪತ್ರಿಕೆ ಕೇರಳದಲ್ಲಿ ಸಿ.ಪಿ.ಐ. (ಎಂ) ನ ನಿಲವನ್ನು ಹೊಗಳುತ್ತಾ "ಪಕ್ಷದ ಮಲೆಯಾಳೀ ಮುಖವಾಣಿ ದೇಶಾಭಿಮಾನಿಯ ಸಂಪಾದಕರಾದ ಕೆ.ಮೋಹನನ್ ರಾಘವನ್‌ಗೆ ಬೆಂಬಲ ನೀಡಿದ್ದಾರೆ" ಎಂಬುದಕ್ಕೆ ವಿಷಾದ ವ್ಯಕ್ತಪಡಿಸಿದೆ. ಈ ರೀತಿ ವಿಷಾದ ಪಡಬೇಕಾಗಿಲ್ಲ ಯಾಕೆಂದರೆ ಮೋಹನನ್ ದೇಶಾಭಿಮಾನಿಯ ಸಂಪಾದಕರೂ ಅಲ್ಲ ಮತ್ತು ರಾಜ್ಯ ಸಮಿತಿಯ ಸದಸ್ಯರಾದ ಅವರು ಪಕ್ಷದ ರಾಜಕೀಯ ನಿಲವಿನ ಪ್ರಬಲ ಪ್ರತಿಪಾದಕರು ಎಂದು ಈ ಪತ್ರಿಕೆಯ ಸಂಪಾದಕರಿಗೆ ಹೇಳಬೇಕಾಗಿದೆ.

ಸಂಡೇ ಅಬ್ಸರ್ವರ್ : ತನ್ನ ಜುಲೈ 6 ಸಂಚಿಕೆಯಲ್ಲಿ "ಇಎಂಎಸ್-ವಿರೋಧಿ ಗುಂಪು ಶಕ್ತಿ ಗೂಡಿಸಿಕೊಂಡಿದೆ" ಎಂದು ತಿರುವನಂತಪುರದ ನಡೆದ ರಾಘವನ್ ಸಭೆಯತ್ತ ತೋರಿಸಿ ಹೇಳಿದೆ ಆದರೆ ಈ ಸಭೆಯಲ್ಲಿ ತಿರುವನಂತಪುರದಲ್ಲಿ ಒಬ್ಬನೇ ಒಬ್ಬ ಪಾರ್ಟಿ ಸದಸ್ಯನೂ ಭಾಗವಹಿಸಲಿಲ್ಲ. ಈಗಾಗಲೇ ಪಕ್ಷದಿಂದ ಉಚ್ಚಾಟಿಸಲ್ಪಟ್ಟವರಷ್ಟೆ ಭಾಗವಹಿಸಿದ್ದರು ಎಂದು ಹೇಳಲು ಮಾತ್ರ ಆ ಪತ್ರಿಕೆ ಮರೆತಿದೆ.

ಮಲೆಯಾಳ ಮನೋರಮಾ : ಈ ಪತ್ರಿಕೆಯಂತೂ ರಾಘವನ್‌ಗೆ ಬೆಂಬಲ ಕಲೆ ಹಾಕಲು ಈಗಾಗಲೆ ಕಾಲವಶರಾಗಿರುವ ಸಂಗಾತಿಗಳ ನೆರವನ್ನು ಪಡೆಯಲೂ ಹಿಂಜರಿದಿಲ್ಲ ಜುಲೈ 9 ರ ಸಂಚಿಕೆಯಲ್ಲಿ ಒಂದು ವರದಿ ಪ್ರಕಟವಾಗಿದೆ- "ತ್ರಿಚೂರ್ ಜಿಲ್ಲೆಗುಬಳ್ಳೂರು ಸ್ಥಳೀಯ ಸಮಿತಿ ಕೆ. ಜಿ. ವಿಜಯನ್ ಅಧ್ಯಕ್ಷತೆಯಲ್ಲಿ ಸಭೆ ಸೇರಿ ರಾಘವನ್‌ರ ಉಚ್ಚಾಟನೆಯನ್ನು ರದ್ದುಗೊಳಿಸಲು ಒತ್ತಾಯಿಸಿತು." ಕಾಂ. ಕೆ ಜಿ ವಿಜಯನ್ ಎರಡು ವರ್ಷಗಳ ಹಿಂದೆಯೇ ತೀರಿಕೊಂಡರು ಮತ್ತು ಇತ್ತೀಚೆಗೆ ಬಳ್ಳೂರು ಸಮಿತಿಯ ಸಭೆ ನಡೆದೇ ಇಲ್ಲ!

ಇಂಡಿಯನ್ ಎಕ್ಸ್‌ಪ್ರೆಸ್ : ಜೂನ್ 2 ರ ಸಂಚಿಕೆಯಲ್ಲಿ ಗೋವಿಂದನ್ ಕುಟ್ಟಿಯ ವಿಶ್ಲೇಷಣೆಯಿದು- "ಸಿ ಪಿ ಐ. (ಎಂ) ಕೇರಳದಲ್ಲಿ ಹಿಂದೆಂದೂ ಇಷ್ಟು ಅಪಹಾಸ್ಯಕರ ಸ್ಥಿತಿಯಲ್ಲಿರಲಿಲ್ಲ ಪಕ್ಷವನ್ನು ಹತೋಟಿಯಲ್ಲಿಟ್ಟುಕೊಂಡವರು ಎಂ.ವಿ.ರಾಘವನ್‌ರನ್ನು ಹೊರಹಾಕಬಯಸುತ್ತಾರೆ ಆದರೆ ಕಾರ್ಯತಂತ್ರ ಹಾಗೂ ಆತ್ಮ ವಿಶ್ವಾಸದ ಅಭಾವದಿಂದಾಗಿ ಅವರು ಹಾಗೆ ಮಾಡುವುದಿಲ್ಲ" ಜೂನ್ 23ರಂದು ಕೇರಳ ರಾಜ್ಯ ಸಮಿತಿ ರಾಘವನ್‌ರನ್ನು ಪಕ್ಷದಿಂದ ಹೊರಹಾಕುವ ನಿರ್ಣಯ ಅಂಗೀಕರಿಸಿತು

ನಿಜವಾಗಿಯೂ ಈ ಬೂರ್ಜ್ವಾ ಪತ್ರಕರ್ತರ ವಿಶ್ಲೇಷಣೆಯು, ಜ್ಞಾನದ ಮಟ್ಟಕ್ಕೆ ಕನಿಕರ ಪಡಬಹುದಷ್ಟೇ.

ಹುಬ್ಬಳ್ಳಿ—ಧಾರವಾಡ ಮಹಾನಗರಗಳಲ್ಲಿ ಹೋರಾಟದ ಅಲೆಗಳು

ಧಾರವಾಡದ ಸತ್ತೂರಿನಲ್ಲಿರುವ ಮೋಪೆಲ್ಸ್ (ಆಯಿಲ್ ಇಂಡಸ್ಟ್ರೀಸ್) ದಲ್ಲಿ 4 ತಿಂಗಳಿಂದ ಕಾರ್ಮಿಕರು ವೇತನವಿಲ್ಲದೆ ಪರಿತಪಿಸುತ್ತಿದ್ದು ಆಡಳಿತ ವರ್ಗದ ಜತೆ ಮಾತುಕತೆಗಳು ಪರಿಣಾಮಕಾರಿಯಾಗದೆ ಹೋದಾಗ ತಾ. 14 ರಿಂದ ಧಾರವಾಡ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಅನ್ನ ಸತ್ಯಾಗ್ರಹ ಪ್ರಾರಂಭಿಸಿದರು. ಅಂದು ಪ್ಲಾಯವುಡ್ ಕಾರ್ಮಿಕ ಸಂಘ ಮೈಸೂರು ಕಿರ್ಲೋಸ್ಕರ್ ಕೆಲಸಗಾರರ ಸಂಘ. ಟ್ರೈವಾಲ ಕಾರ್ಖಾನೆ ಸಂಘ, ಎಸ್. ಎಫ್. ಐ. ಡಿ. ವೈ. ಎಫ್. ಐ. ನ ಎಲ್ಲ ಸದಸ್ಯರು (ಸುಮಾರು 300 ಜನ) ಮೆರವಣಿಗೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಎದುರು ಮತಪ್ರದರ್ಶನ ನಡೆಸಿ ಸಿ. ಐ. ಟಿ. ಯು. ನೇತೃತ್ವದ ಹು. ಧಾ. ನೌ. ಕಾ. ವಿ. ಯು ಜಂಟಿ ಕ್ರಿಯಾ ಸಮಿತಿಯ ಪತಿಯಿಂದ ಮನವಿ ಕೊಟ್ಟು ನಂತರ ಅನ್ನ ಸತ್ಯಾಗ್ರಹ ಪ್ರಾರಂಭಿಸಲಾಯ್ತು. ಕಾಂ ವಿ ಎನ್. ಹಳಕಟ್ಟಿ ಕಾಂ ಎಸ್. ಆರ್. ಪರಪ್ಪನವರ, ಕಾ. ಕೃಷ್ಣ ಕಟ್ಟಿ ಮುಂತಾದವರು ಮಾತನಾಡಿ ಬೆಂಬಲ ಸೂಚಿಸಿದರು.

ದಿನಾಂಕ 18 ರಂದು ಹುಬ್ಬಳ್ಳಿಯ ದರಬಾರ ಬೀಡಿ ಖಾರಖಾನೆಯೆದುರು ಕನಿಷ್ಟ ಕೂಲಿಗಾಗಿ ಒತ್ತಾಯಿಸಿದ 10 ಜನ ಕಾರ್ಮಿಕರನ್ನ ವಜಾ ಮಾಡಿದ್ದರ ವಿರುದ್ಧ ಅವರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳುವಂತೆ ಒತ್ತಾಯಿಸಿ ಅನ್ನ ಸತ್ಯಾಗ್ರಹ ಪ್ರಾರಂಭಿಸಲಾಗಿದೆ ಆಡಳಿತವರ್ಗ ನ್ಯಾಯಾಲಯದಿಂದ ತಡೆಯಾಜ್ಞೆ ತಂದು ಅದನ್ನು ನಿಲ್ಲಿಸಲು ಪ್ರಯತ್ನ ನಡೆಸಿತು. ಆದರೆ ಅದನ್ನು ಮೀರಿ ಕಾರ್ಮಿಕರು ಮೆರವಣಿಗೆಯಲ್ಲಿ ತೆರಳಿ ಸತ್ಯಾಗ್ರಹ ಪ್ರಾರಂಭಿಸಿದರು. ಬೀಡಿ ಕಾರ್ಮಿಕರ ಫೆಡರೇಶನ್ನಿನ ಕಾರ್ಯದರ್ಶಿ ಕಾಂ. ಮಹಮ್ಮದ್ ದಸ್ತಗೀರ್ ಸಿ ಐ ಟಿ ಯು. ಕಾರ್ಯದರ್ಶಿ ಕಾಂ ವಿ ಜೆ ಕೆ. ನಾಯರ್, ಹರಿಹರದ ಕಾಂ. ಅಮೀನಾಬಿ, ಕಾಂ. ಮದಾರ್ ಸಾಬ ಮುಂತಾದವರು ಮಾತನಾಡಿ ಬೆಂಬಲಿಸಿದರು. ಧಾರವಾಡದ ಪ್ಲಾಯವುಡ್ ಕಾರ್ಮಿಕರು ಹುಬ್ಬಳ್ಳಿಯ ಮೈಸೂರು ಕಿರ್ಲೋಸ್ಕರ್, ವಿಜಯದೀಪ ಮುಂತಾದ ಕಾರಖಾನೆ ಕಾರ್ಮಿಕರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು ಸುರಿಯುವ ಮಳೆಯಾದರೂ ಮೆರವಣಿಗೆ ನಡೆಸಿ ಕಾರ್ಮಿಕರು ತಮ್ಮ ಬೆಂಬಲ ಸೂಚಿಸಿದರೆಂದು ವರದಿಯಾಗಿದೆ.

ವಿಶ್ವವಿದ್ಯಾನಿಲಯ ನೌಕರರ ಹೋರಾಟಕ್ಕೆ ಜಯ

ಕೇರಳ ರಾಜ್ಯದ ಐದು ವಿಶ್ವ ವಿದ್ಯಾನಿಲಯಗಳ ನೌಕರರು 50 ದಿನಗಳಿಂದ ನಡೆಸುತ್ತಿದ್ದ ಹೋರಾಟವು, ವಿಶ್ವವಿದ್ಯಾನಿಲಯ ನೌಕರರ ಕ್ರಿಯಾ ಸಮಿತಿ ಹಾಗೂ ಕೇರಳ ಸರಕಾರದ ನಡುವೆ ಒಪ್ಪಂದ ಏರ್ಪಟ್ಟು ನಿಲ್ಲಿಸಲಾಯಿತು. ಇದೊಂದು ನೌಕರರ ವಿಜಯವಾಗಿದೆ ಸುಮಾರು 7000 ನೌಕರರ ಹೋರಾಟಕ್ಕೆ ವಿಧ್ಯಾರ್ಥಿಗಳ ಹಾಗೂ ಉಪಾಧ್ಯಾಯರುಗಳ ಸಂಪೂರ್ಣ ಬೆಂಬಲ ದೊರಕಿತ್ತು. ಕೇರಳ ಸರಕಾರ ಡಿಗ್ರಿ ಪೂರ್ವ ತರಗತಿಗಳನ್ನು [ನಮ್ಮಲ್ಲಿ ಪಿಯುಸಿ ಇದ್ದಂತೆ] ವಿಶ್ವವಿದ್ಯಾಲಯಗಳಿಂದ ಕಿತ್ತು ತೆಗೆದು ಇದಕ್ಕೊಂದು ಹೊಸ ಮಂಡಳಿಯನ್ನು ರಚಿಸಿ ಖಾಸಗೀಕರಣಕ್ಕೆ ಸಹಾಯ ಮಾಡುವ ಪ್ರಯತ್ನದಲ್ಲಿತ್ತು. ಈ ಪ್ರಯತ್ನವನ್ನು ವಿರೋಧಿಸಿ ನೌಕರರು ಹೋರಾಟಕ್ಕಿಳಿದರು. ಕ್ರಿಯಾ ಸಮಿತಿಯು ಕೂಡಾಗಿ ಸರಕಾರದ ಯೋಜನೆಯನ್ನು ವಿರೋಧಿಸದೇ, ಈ ಯೋಜನೆಯು ಕಾರ್ಯಗತವಾಗುವ ಮೊದಲು ಉಪಾಧ್ಯಾಯರೊಡನೆ, ವಿಧ್ಯಾರ್ಥಿಗಳೊಡನೆ, ಸಂಬಂಧಪಟ್ಟವರೊಡನೆ ಚರ್ಚೆ ನಡೆಸಿ ತೀರ್ಮಾನಕ್ಕೆ ಬರಬೇಕೆಂದು ಒತ್ತಾಯ ಮಾಡಿತ್ತು. ಸರಕಾರ ಈ ಬೇಡಿಕೆಯನ್ನು ಕಿವಿಗೆ ಹಾಕಿಕೊಳ್ಳದ ಕಾರಣ ನೌಕರರು ಹೋರಾಟದ ದಾರಿ ಹಿಡಿಯಬೇಕಾಯಿತು.

ಸುದ್ಧಿ ಸಮಾಚಾರ ವಿವಿಧ ರಾಜ್ಯಗಳಲ್ಲಿ

ಕೇರಳ ಸಿಮ್ಲಾ ಪಂಜಾಬ್

ಸಿಮ್ಲಾದಲ್ಲಿ ಬೆಳೆಯುತ್ತಿರುವ ಎಡ ಚಳವಳಿ

ಪ್ರಜಾತಾಂತ್ರಿಕ ಚಳುವಳಿಯು, ಸಿಮ್ಲಾದಲ್ಲಿ ಮುಖ್ಯವಾಗಿ ಸರಕಾರಿ ಹಾಗೂ, ಸಾರ್ವಜನಿಕ ಕ್ಷೇತ್ರ ನೌಕರರ ಮಧ್ಯದಲ್ಲಿ ಬೆಳೆಯುತ್ತಿದೆ. ಮುಖ್ಯವಾಗಿ ಯುವಕರು, ವಿದ್ಯಾರ್ಥಿಗಳು, ಹೋಟೆಲು ಹಾಗೂ ಪ್ರವಾಸೋದ್ಯಮದ ಕಾರ್ಮಿಕರಲ್ಲಿ ಬೆಳೆದ ಎಡ ಶಕ್ತಿಯು ಹಿಮಾಚಲ ಪ್ರದೇಶದ ಸರಕಾರೀ ನೌಕರರಲ್ಲೂ ಬೆಳೆಯುತ್ತಿದೆ ಇಲ್ಲಿವರೆಗೆ ನಡೆದ ಎಲ್ಲಾ ಹೋರಾಟಗಳಲ್ಲೂ ಎನ್ ಜಿ ಓ ಯುನಿಯನ್ ಮಾತ್ರ ಹೊರಗುಳಿಯುತ್ತಿತ್ತು ಇದಕ್ಕೆ ಕಾರಣ, ಶ್ರೀಮಂತರೊಡನೆ ಹಾಗೂ ಆಳುವ ವರ್ಗದವರೊಡನೆ ಕೈಕುಲುಕುವ ಬಿಜೆಪಿ ಪಕ್ಷದ ನೇತೃತ್ವ. ಆದರೆ ಈ ನೇತೃತ್ವದ ಮೋಸವನ್ನು ಅರಿತ ಸಿಮ್ಲಾದ ಎನ್ ಜಿ ಓ ಘಟಕದವರು ಬೇರೆಯಾಗಿ ಹೊರಬಂದು, ನೇತೃತ್ವದಲ್ಲಿರುವ ನಾಯಕರನ್ನು ಸಂಘದಿಂದ ಹೊರಗಟ್ಟಿದೆ ಗಂಗಾಸಿಂಗ್ ಟಿ ಕಿ ರಾಂ ಎನ್ನುವವರ ಹೊಸ ನೇತೃತ್ವದಲ್ಲಿ ಹೊಸ ಕ್ರಿಯಾ ಸಮಿತಿ ರಚಿಸಿ ಹೋರಾಟಕ್ಕೆ ಕರೆಕೊಡಲಾಗಿದೆ. ಮೇ 31 ರಂದು ನಡೆದ ಸತ್ಯಾಗ್ರಹದಲ್ಲಿ ಲಾಠಿಚಾರ್ಜ್ ಆಗಿ 50 ಜನರು ಗಾಯಗೊಂಡರು. ಗಂಗಾಸಿಂಗ್ ಅವರು ಆಸ್ಪತ್ರೆಗೆ ಸೇರಿದರು. ಇದಕ್ಕೆ ಪ್ರತಿಭಟನೆಯಾಗಿ ಮಾಲ್ ಎನ್ನುವಲ್ಲಿ 10,000ಕ್ಕೂ ಹೆಚ್ಚು ಜನರು ಮೆರವಣಿಗೆ ತೆಗೆದರು ಈ ಸಭೆಯನ್ನುದ್ದೇಶಿಸಿ ಎಸ್ ಎಫ್ ಐನ ರಾಜನ್ ಚಾಂಡೆಲ್ ಮಾತನಾಡಿದರು ಇದರೊಂದಿಗೆ ಪೌರ ಕಾರ್ಮಿಕರು ಸಿಮ್ಲಾದಲ್ಲಿ ಹೋರಾಟಕ್ಕಿಳಿದಿದ್ದಾರೆ. ಉಳಿದೆಲ್ಲಾ ನೌಕರರು ಇವರಿಗೆ ಸಹಾನುಭೂತಿಯನ್ನು ತೋರಿದ್ದಾರೆ ಇವೆಲ್ಲದರಲ್ಲೂ ಸಿಐಟಿಯು ಪ್ರಧಾನ ಪಾತ್ರ ವಹಿಸಿದೆ. ಎಸ್ ಎಫ್ ಐ ;ಡಿ ವೈ ಎಫ್ ಐ ಕೂಡ ಇವರ ಬೆಂಬಲಕ್ಕೆ ನಿಂತಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಇವರ ಪರವಾಗಿ ಪ್ರತಿಭಟನಾ ಮೆರವಣಿಗೆಯನ್ನು ಏರ್ಪಡಿಸಿತು. ಈ ಹೋರಾಟವನ್ನು ದಮನ ಮಾಡಲು ಪ್ರಯತ್ನಿಸಿದ ಸರಕಾರ ಸುಮಾರು 500 ಜನ ಕ್ರಿಯಾ ಸಮಿತಿಯ ಸದಸ್ಯರನ್ನು ಕೆಲಸದಿಂದ ತೆಗೆದು ಹಾಕಿತು. ಇದರಿಂದ 25,000 ಕಾರ್ಮಿಕರ ಪ್ರತಿಭಟನಾ ಮೆರವಣಿಗೆಯನ್ನು ಎದುರಿಸಬೇಕಾಯಿತು. ಮುಖ್ಯಮಂತ್ರಿಗಳು ಹೊರ ಬಂದು ಕ್ರಿಯಾ ಸಮಿತಿಯ ಸದಸ್ಯರನ್ನು ಕೆಲಸಕ್ಕೆ ತೆಗೆದು ಕೊಳ್ಳುವುದಾಗಿ ವಾಗ್ದಾನ ಮಾಡಿದ ನಂತರ ಹೋರಾಟವನ್ನು ಮುಗಿಸಲಾಯಿತು.

ಮುಕ್ತಸರ್ ಕಗ್ಗೊಲೆಯ ಖಂಡನೆ

ಪಂಜಾಬಿನ ಮುಕ್ತಸರ್ ಎಂಬಲ್ಲಿ ಭಯೋತ್ಪಾದಕರು ನಡೆಸಿದ 14 ಜನರ ಕಗ್ಗೊಲೆಯನ್ನು ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷ ಹಾಗೂ ಇತರ ರಾಜಕೀಯ ಪಕ್ಷಗಳು ಖಂಡಿಸಿವೆ. ಎಡ ಹಾಗೂ ಪ್ರಜಾತಾಂತ್ರಿಕ ರಾಜಕೀಯ ಪಕ್ಷಗಳ ಜಂಟಿ ಹೇಳಿಕೆಯಲ್ಲಿ, ಭಯೋತ್ಪಾದಕರು ಪಂಜಾಬಿನಲ್ಲಿ ಮತೀಯ ಗಲಭೆಯನ್ನು ಹರಡುವ ಉದ್ದೇಶದಿಂದ ಹೀನಾಯವಾದ ಪ್ರಚೋದನೆ ನಡೆಸುತ್ತಿದ್ದಾರೆ ಎಂದು ಹೇಳಿದೆ.

ಈ ಹೊಸ ಜವಳಿ ನೀತಿ ಯಾರಿಗಾಗಿ ?

ರಾಜೀವ್‌ಗಾಂಧಿಯವರು ಅಧಿಕಾರಕ್ಕೆ ಬಂದ ಮೇಲೆ ಅನೇಕ ಹೊಸ ನೀತಿಗಳನ್ನು ಜಾರಿಗೆ ತಂದಿದ್ದಾರೆ. ಈ ನೀತಿಗಳು ಯಾರ ಸುಖಕ್ಕಾಗಿ ? ಎಂಬ ಪ್ರಶ್ನೆ ಭೂತಾಕಾರವಾಗಿ ಮೇಲೆಳುತ್ತಿದೆ. ಈ ನೀತಿಗಳಲ್ಲಿ ಹೊಸ ಆರ್ಥಿಕ ನೀತಿ, ಹೊಸ ಶಿಕ್ಷಣ ನೀತಿಯ ಬಗ್ಗೆ ಈಗಾಗಲೇ ನೀವು ಓದಿದ್ದೀರಿ ಈ ಹೊಸ ಜವಳಿ ನೀತಿಯ ಬಗ್ಗೆ……………

ಇತ್ತೀಚಿಗೆ ಬೆಂಗಳೂರಿನಲ್ಲಿ ಇದ್ದಕ್ಕಿದ್ದಂತೆ 40-50 ಸಾವಿರದಷ್ಟು ಜನ ನೇಕಾರರು – ಅವರ ಜೀವನದಲ್ಲಿಯೇ ಮೊದಲಬಾರಿಗೆ ಇರಬಹುದು–ರಾಜಭವನಕ್ಕೆ ಮೆರವಣಿಗೆ ಹೊರಟರು ಏಕೆ?

ಜವಳಿ ಬಟ್ಟೆ ತಯಾರಿಕಾ ಕೇಂದ್ರಗಳಲ್ಲಿ ಬೆಂಗಳೂರು ನಗರ ಕರ್ನಾಟಕದಲ್ಲಿಯೇ ಒಂದು ಪ್ರಮುಖವಾದ ನಗರ, ಸುಮಾರು 10000 ಕೆಲಸಗಾರರನ್ನು ಹೊಂದಿರುವ ಮೂರು ದೊಡ್ಡ ಜವಳಿ ಗಿರಣಿಗಳು–ರಾಜಾ ಮಿಲ್ ಎಂದು ಜನಜನಿತವಾಗಿರುವ ಮೈಸೂರು ಮಿಲ್ಸ್, ಮಿನರ್ವ ಮಿಲ್ಸ್ ಮತ್ತು ಬಿನ್ನಿ ಮಿಲ್ಸ್–ಬೆಂಗಳೂರು ನಗರದಲ್ಲಿವೆ.

ರಾಮಕುಮಾರ್ ಮಿಲ್ಸ್, ಸೂರ್ಯೋದಯ ಮಿಲ್ಸ್, ಭದ್ರಾ ಮಿಲ್ಸ್ ಮುಂತಾದ ಮಧ್ಯಮ ದರ್ಜೆಯ ಗಿರಣಿಗಳೂ ಕೂಡ ಬೆಂಗಳೂರು ನಗರದಲ್ಲಿ ಸ್ಥಾಪಿತವಾಗಿವೆ. ವಿದ್ಯುತ್ ಚಾಲಿತ ಮಗ್ಗಗಳಿಂದ ಸಿಲ್ಕ್ ಸೀರೆಗಳನ್ನು ಉತ್ಪಾದಿಸುವವರ ಸಂಖ್ಯೆಯೂ ಸಾಕಷ್ಟು ದೊಡ್ಡದಿದೆ. ಮಧ್ಯಮ ದರ್ಜೆಯ ಗಿರಣಿಗಳು ಮತ್ತು ವಿದ್ಯುತ್ ಚಾಲಿತ ಮಗ್ಗಗಳಲ್ಲಿ ಸುಮಾರು 20000ಕ್ಕೂ ಹೆಚ್ಚಿನ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಈ ಕೈಗಾರಿಕೆಗೆ ಬೇಕಾಗುವ ಕಚ್ಚಾ ವಸ್ತುಗಳಾದ ಹತ್ತಿ ಮತ್ತು ರೇಷ್ಮೆಗಳ ವ್ಯವಸಾಯ ಮತ್ತು ಮಾರಾಟದಲ್ಲಿ ಸಾವಿರಾರು ಜನರು ನಿರತರಾಗಿದ್ದಾರೆ. ಸುಮಾರು ಇಷ್ಟೇ ಪ್ರಮಾಣದ ಜನರು ಉತ್ಪಾದನೆಯ ಮಾರಾಟ ದಂಧೆಯಲ್ಲಿ ಕೆಲಸ ಮಾಡುತ್ತಿದ್ದಾರೆ.

ಕೇಂದ್ರ ಸರ್ಕಾರದ ಹೊಸ ಜವಳಿ ನೀತಿಯು ಈ ಮೇಲಿನ ಸಾವಿರಾರು ಜನರ ಬದುಕನ್ನು ಅಪಾಯದಂಚಿಗೆ ತಳ್ಳಿದೆ. ಜವುಳಿ ಕೈಗಾರಿಯಲ್ಲಿ ಉಂಟಾಗಿರುವ ವಿಷಮ ಪರಿಸ್ಥಿತಿಯನ್ನು ಹೋಗಲಾಡಿಸುವ ನೆಪದಲ್ಲಿ ಪರಿಹರಿಸಲಾಗದಂಥ ಭೀಕರ ಸಮಸ್ಯೆಯನ್ನು ಹುಟ್ಟು ಹಾಕುತ್ತಿದ್ದಾರೆ.

ಏಕಸ್ವಾಮ್ಯ ಬಂಡವಾಳಶಾಹಿಗಳ ಮತ್ತು ವಿದೇಶಿ ಬಂಡವಾಳಗಾರರ ಹಿತಾಸಕ್ತಿಯನ್ನು ಕಾಪಾಡುವ ಧೋರಣೆಯನ್ನು ಕೇಂದ್ರ ಸರ್ಕಾರ ಪಾಲಿಸುತ್ತಾ ಬಂದಿದೆ. ಜವಳಿ ಕೈಗಾರಿಕೆಯನ್ನೇ ಅವಲಂಭಿಸಿರುವ ದೇಶದ ಉದ್ದಗಲದಲ್ಲಿರುವ ಲಕ್ಷಾಂತರ ಜನರ ಹಿತಾಸಕ್ತಿಯನ್ನು ಕಾಪಾಡಬೇಕಾಗಿರುವ ಕೇಂದ್ರ ಸರ್ಕಾರ, ಈ ಹೊಸ ಜವುಳಿ ನೀತಿಯ ಮೂಲಕ ದೇಶಾದ್ಯಂತ ಹರಡಿಕೊಂಡಿರುವ ಕೇವಲ ನೂರಕ್ಕೂ ಕಡಿಮೆ ಇರಬಹುದಾದ ಏಕಸ್ವಾಮ್ಯ ಬಂಡವಾಳ ಶಾಹಿಗಳ ಹಿತಾಸಕ್ತಿಯನ್ನು ಕಾಪಾಡುವ ಗುರಿಯನ್ನು ಹೊಂದಿದೆ.

ಷಟಲ್ ರಹಿತ ಗಿರಣಿ, ಓಪನ್ ಅಂಡ್ ಸ್ಪಿನ್ನಿಂಗ್ ಮುಂತಾದವುಗಳನ್ನು ಹೊರ ದೇಶಗಳಿಂದ ಆಮದು ಮಾಡಿಕೊಂಡು ಜವಳಿ ಕೈಗಾರಿಕೆಯನ್ನು ಆಧುನೀಕರಿಸಬೇಕೆಂಬ ನಿರ್ಧಾರವನ್ನು ಕೇಂದ್ರ ಸರ್ಕಾರ ತಗೆದುಕೊಂಡಿದೆ.

ಈ ಯಂತ್ರಗಳು, ಮೊದಲನೆಯದಾಗಿ ಪಾಶ್ಚಿಮಾತ್ಯ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ತಯಾರಾಗುತ್ತವೆ. ಅವು ನೇರವಾಗಿ, ಇಲ್ಲಿಯ ಜವುಳಿ ಕೈಗಾರಿಕಾ ಯಂತ್ರಗಳನ್ನು ತಯಾರಿಸುವ ಕೈಗಾರಿಕೆಯನ್ನು ನಾಶ ಮಾಡುತ್ತವೆ.

ಎರಡನೆಯದಾಗಿ ಅವು ಹತ್ತರಲ್ಲಿ ಒಂಭತ್ತು ಜನ ಕಾರ್ಮಿಕರನ್ನು ಕೆಲಸದಿಂದ ಹೊರಕ್ಕೆ ತಳ್ಳುತ್ತವೆ, ಮತ್ತು

ಮೂರನೆಯದಾಗಿ ಅವು ರಫ್ತು ಮಾಡಲು ಯೋಗ್ಯವಾದ ಬಟ್ಟೆಗಳನ್ನು ಮಾತ್ರ ತಯಾರಿಸುತ್ತವೆ.

(6ನೇ ಪುಟ ನೋಡಿ)

ನೂತನ ಶಿಕ್ಷಣ ನೀತಿಗೆ ಪ್ರತಿಭಟನೆ

ಬೆಂಗಳೂರು :

ಎಸ್. ಎಫ್. ಐ. ಬೆಂಗಳೂರು ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಜುಲೈ 25ರಂದು ನೂತನ ಶಿಕ್ಷಣ ನೀತಿಯನ್ನು ವಿರೋಧಿಸಿ ನಗರದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಯಿತೆಂದು ವರದಿ ತಿಳಿಸಿದೆ. ನಗರದ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಮೈಸೂರು ಬ್ಯಾಂಕ್ ವೃತ್ತದಿಂದ ರಾಜಭವನದವರೆಗೆ ಮೆರವಣಿಗೆ ನಡೆಸಿ ರಾಜ್ಯದ ರಾಜ್ಯಪಾಲರಿಗೆ ಮನವಿ ಪತ್ರವನ್ನು ಅರ್ಪಿಸಿ ಈ ಕುರಿತು ಅವರೊಂದಿಗೆ ಚರ್ಚೆ ನಡೆಸಿತೆಂದೂ ಸಾರ್ವತ್ರಿಕ ಕಡ್ಡಾಯ ಶಿಕ್ಷಣವನ್ನು ಕಡಗಣಿಸಿ ಮಾದರಿ ಶಾಲೆಯ ಸ್ಥಾಪನೆ, ಶಿಕ್ಷಣವನ್ನು ಖಾಸಗೀಕರಣಗೊಳಿಸುವ ಕ್ರಮಗಳನ್ನು ಎಸ್. ಎಫ್. ಐ. ವಿರೋಧಿಸುವುದಾಗಿ ನಿಯೋಗ ತಿಳಿಸಿತೆಂದು ಹೇಳಿಕೆಯಲ್ಲಿ ತಿಳಿಸಲಾಗಿದೆ. ನಂತರ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಎಸ್. ಎಫ್. ಐ. ರಾಜ್ಯ ಕಾರ್ಯದರ್ಶಿ ಎಸ್. ಆರ್. ಆರಾಧ್ಯ, ಜಿಲ್ಲಾ ಕಾರ್ಯದರ್ಶಿ ಕಾ. ಎಸ್. ರಾಜಣ್ಣ ಹಾಗೂ ಕಾ. ಕೆ. ಶಾಂತಕುಮಾರಿ ಯವರುಗಳು ಮಾತನಾಡಿದರೆಂದು ವರದಿಯಾಗಿದೆ.

ಮಂಗಳೂರು :

ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ) ರಾಜ್ಯ ಸಮಿತಿ ನೀಡಿದ ಕರೆಯಂತೆ ಎಸ್.ಎಫ್.ಐ ನ ಮಂಗಳೂರು ನಗರ ಸಮಿತಿ, ನೂತನ ಶಿಕ್ಷಣ ನೀತಿಯನ್ನು ವಿರೋಧಿಸಿ ಜುಲೈ 25 ರಂದು ಮಂಗಳೂರು ನಗರದಲ್ಲಿ ಜೀಪು ಜಾಥಾ ಸಂಘಟಿಸಿತೆಂದು ಹೇಳಿಕೆ ತಿಳಿಸಿದೆ. ಎಸ್.ಎಫ್.ಐ ನ ಬಾವುಟಗಳನ್ನು, ನೂತನ ಶಿಕ್ಷಣ ನೀತಿಯನ್ನು ವಿರೋಧಿಸುವ ಬ್ಯಾನರುಗಳನ್ನು ಹೊಂದಿದ ಜೀಪು ಘೋಷಣೆಗಳನ್ನು ಮೊಳಗಿಸುತ್ತ ನಗರದ ಪ್ರಮುಖ ಶಾಲಾ ಕಾಲೇಜುಗಳಿಗೆ ತೆರಳಿ ನೂತನ ಶಿಕ್ಷಣ ನೀತಿಯ ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿಯುಂಟು ಮಾಡುವಂತಹ ಕಾರ್ಯಕ್ರಮಗಳನ್ನು ನಡೆಸಿತೆಂದು ವರದಿಯಾಗಿದೆ. ಎಸ್.ಎಫ್.ಐ ನ ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾ. ಸುನೀಲ್ ನಟೇಕರ ಅವರು ಕಾನೂನು ಕಾಲೇಜಿನ ಬಳಿ ಜಾಥಾವನ್ನು ಉದ್ಘಾಟಿಸಿದರು, ಕೇಂದ್ರ ಸರಕಾರದ ಹೊಸ ಶಿಕ್ಷಣ ನೀತಿಯು ಜಿಲ್ಲೆಗೊಂದು ಮಾದರಿ ಶಾಲೆ, ಪದವಿಗಳನ್ನು ಉದ್ಯೋಗದಿಂದ ಪ್ರತ್ಯೇಕಿಸುವ, ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಪ್ರೋತ್ಸಾಹಿಸುವ ಈ ನೀತಿಯು ಕೇಂದ್ರ ಸರಕಾರದ ನೂತನ ಆರ್ಥಿಕ ನೀತಿಗೆ ಪೂರಕವಾಗಿದೆಯೆಂದು ಅವರು ತಿಳಿಸಿ ಆದ್ದರಿಂದ ಈ ನೂತನ ಶಿಕ್ಷಣ ನೀತಿಯ ವಿರುದ್ಧ ವಿದ್ಯಾರ್ಥಿಗಳು ಸಂಘಟಿತರಾಗಿ ಹೋರಾಟ ನಡೆಸಬೇಕೆಂದು ಕರೆ ನೀಡಿದರು. ಈ ಕಾರ್ಯಕ್ರಮದ ಮೂಲಕ 8,000 ವಿದ್ಯಾರ್ಥಿಗಳಿಗೆ ಎಸ್.ಎಫ್.ಐ ನ ಸಂದೇಶವನ್ನು ತಲುಪಿಸಲಾಗಿದೆಯೆಂದು ವರದಿ ತಿಳಿಸಿದೆ.

ಮೈಸೂರು :

ಮೈಸೂರು ಜಿಲ್ಲಾ ಸಮಿತಿಯು ಜುಲೈ 25 ರಂದು ಜನ ಜಾಗೃತಿ ಕಾರ್ಯಕ್ರಮ ನಡೆಸಿರುವುದಾಗಿ ವರದಿಯಾಗಿದೆ. ವಿವಿಧ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ನೂತನ ಶಿಕ್ಷಣ ನೀತಿಯ ಅಪಾಯದ ಬಗ್ಗೆ ಸಭೆಗಳ ಮೂಲಕ ಅರಿವು ಮಾಡಿಕೊಡಲಾಯಿತೆಂದು ಅದು ತಿಳಿಸಿದೆ. ಈ ಜನ ವಿರೋಧಿ ನೀತಿಯನ್ನು ಹಿಂತೆಗೆದು ಕೊಳ್ಳಬೇಕೆಂದು ಒತ್ತಾಯಿಸಿ ಸಮಿತಿಯು ಕೇಂದ್ರ ಶಿಕ್ಷಣ ಮಂತ್ರಿಯವರಿಗೆ ತಂತಿಯನ್ನೂ, ಜಿಲ್ಲಾಧಿಕಾರಿಗೆ ಮನವಿಯನ್ನು ಸಲ್ಲಿಸಲಾಗಿದೆಯೆಂದು ವರದಿ ತಿಳಿಸಿದೆ.

ಮೈಸೂರು ವಿಶ್ವ ವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು ಕೆಲವು ದಿನಗಳಿಂದ ನಡೆಸುತ್ತಿರುವ ಮುಷ್ಕರಕ್ಕೆ ಜಿಲ್ಲಾ ಸಮಿತಿ ಬೆಂಬಲ ನೀಡಿದೆ.

ವಿಚಾರ ಸಂಕಿರಣ

ನೂತನ ಶಿಕ್ಷಣ ನೀತಿ ಹಾಗೂ ಡೊನೇಷನ್ ವಿರೋಧೀ ವಿಚಾರ ಸಂಕಿರಣವೊಂದು ಜುಲೈ 4ರಂದು ಮೈಸೂರಿನಲ್ಲಿ ನಡೆದಿದೆ. ಎಸ್. ಎಫ್. ಐ. ಮೈಸೂರು ಜಿಲ್ಲಾ ಸಮಿತಿಯ ಆಶ್ರಯದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಎಸ್ ಎಫ್. ಐ. ನ ಮಾಜಿ ಅಧ್ಯಕ್ಷರಾಗಿದ್ದ ಈಗಿನ ಪಾರ್ಲಿಮೆಂಟ್ ಸದಸ್ಯರಾದ ಕಾ. ಎಂ. ಎ. ಬೇಬಿ ಅವರು ನೂತನ ಶಿಕ್ಷಣ ನೀತಿಯು ದೇಶದ ಜನತೆಯನ್ನು ಅನಕ್ಷರತೆಯ ಕರಾಳ ಕೂಪದಲ್ಲಿ ಮುಳುಗಿಸುವ ತಂತ್ರವನ್ನೊಳಗೊಂಡ, ಪ್ರಾಥಮಿಕ ಶಿಕ್ಷಣವನ್ನು ಒದಗಿಸುವಲ್ಲೂ ವಿಫಲವಾಗಿದೆಯೆಂದು ತಿಳಿಸಿದರು.

ಸಮಾರಂಭವನ್ನು ಉದ್ಘಾಟಿಸಿದ ಸಿ. ಐ. ಟಿ. ಯು. ರಾಜ್ಯ ಅಧ್ಯಕ್ಷ ಕಾ. ಎಸ್. ಸೂರ್ಯನಾರಾಯಣ ರಾವ್ ಅವರು ಮಾತನಾಡಿ 1968 ರಲ್ಲಿ ಕೊಠಾರಿ ಆಯೋಗದ ಶಿಫಾರಸಿನಂತೆ 6 ರಿಂದ 14 ವರ್ಷದವರೆಗೆ ಎಲ್ಲಾ ಮಕ್ಕಳಿಗೂ ಉಚಿತ ಕಡ್ಡಾಯ ಶಿಕ್ಷಣ ಒದಗಿಸುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆಯೆಂದು ತಿಳಿಸಿದರು.

ಸಮಾರಂಭದಲ್ಲಿ ಎಸ್. ಎಫ್. ಐ. ರಾಜ್ಯ ಕಾರ್ಯದರ್ಶಿ ಕಾ. ಎಸ್. ಆರ್. ಆರಾಧ್ಯ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಎಸ್.ಎಫ್. ಐ. ರಾಜ್ಯ ಸಮಿತಿ ಅಧ್ಯಕ್ಷರಾದ ಕಾ. ಆರ್. ಜಯಕುಮಾರ್ ವಹಿಸಿದ್ದರು. ಕಾ. ಎಸ್. ಆರ್. ಲೀಲಾವತಿ ಸ್ವಾಗತಿಸಿ ಕಾ. ಬಸವರಾಜ ವಂದನಾರ್ಪಣೆ ಮಾಡಿದರೆಂದು ವರದಿ ತಿಳಿಸಿದೆ.

ಹರಿಹರದಲ್ಲಿ ವಿಚಾರ ಸಂಕಿರಣ

ನೂತನ ಶಿಕ್ಷಣ ನೀತಿಯ ಕುರಿತು ಜುಲೈ 19 ರಂದು ಹರಿಹರದ ಎಸ್. ಎಫ್. ಐ ಶಾಖೆಯು ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು.

ವಿಚಾರ ಸಂಕಿರಣದಲ್ಲಿ ಎಸ್. ಎಫ್ ಐ. ನ ರಾಜ್ಯ ಕಾರ್ಯದರ್ಶಿ ಕಾ. ಎಸ್.ಆರ್.ಆರಾಧ್ಯ,ಸಿ. ಐ. ಟಿ. ಯು. ರಾಜ್ಯ ಸಮಿತಿ ಕಾರ್ಯದರ್ಶಿ ಕಾ. ವಿ. ಜೆ. ಕೆ. ನಾಯರ್ ಮಾತನಾಡಿದರೆಂದು ಹೇಳಿಕೆ ತಿಳಿಸಿದೆ.

ಚಿತ್ರದುರ್ಗ ಜಿಲ್ಲಾ ಎಸ್. ಎಫ್. ಐ. ಸಮಿತಿಯ ಆಶ್ರಯದಲ್ಲಿ ನಡೆದ ಒಂದು ದಿನದ ಅಧ್ಯಯನ ಶಿಬಿರದ ಕೊನೆಯಲ್ಲಿ ಈ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ಶಿಬಿರದಲ್ಲಿ ದಾವಣಗೆರೆ, ಹರಿಹರ, ಚಳ್ಳಕೆರೆ, ಮೊಳಕಾಲ್ಮೂರು ಶಾಖೆಗಳ ವಿದ್ಯಾರ್ಥಿ ಪ್ರತಿನಿಧಿಗಳು ಭಾಗವಹಿಸಿರುವುದಾಗಿ ಶಿಬಿರದಲ್ಲಿ ಕಾ. ಪ್ರಸನ್ನಕುಮಾರ್, ಕಾ. ಎಸ್. ಆರ್. ಆರಾಧ್ಯ, ಕಾ. ಗಂಗಾಧರ ಹಾಗೂ ಕಾ. ವಿ. ಜೆ. ಕೆ. ನಾಯರ್ ಅವರು ಉಪನ್ಯಾಸಗಳನ್ನು ನೀಡಿರುವುದಾಗಿ ತಿಳಿದು ಬಂದಿದೆ.

ಕಾರ್ಯಕ್ರಮದ ಪ್ರಾರಂಭದಲ್ಲಿ ಕಾ. ಅಣ್ಣಪ್ಪ ಸ್ವಾಗತಿಸಿ ಕೊನೆಯಲ್ಲಿ ಕಾ. ಕೃಷ್ಣಾಜಿ ಕಲಾಲ್ ವಂದನಾರ್ಪಣೆ ಮಾಡಿದರೆಂದು ವರದಿ ತಿಳಿಸಿದೆ.

ಎಲ್ಲಾ ಕೇಂದ್ರೀಯ ಕಾರ್ಮಿಕ ಸಂಘಗಳಿಂದ ಮೊಳಗಿದ ಕಹಳೆ

ದೇಶವನ್ನೊಡೆಯುವ ಶಕ್ತಿಗಳ ಬಗ್ಗೆ ಸತತ ಎಚ್ಚರ ಅಗತ್ಯ

1. ರಾಷ್ಟ್ರೀಯ ಐಕ್ಯತೆ ಮತ್ತು ಕೋಮುವಾದ, ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ನವದೆಹಲಿಯಲ್ಲಿ ಮೇ 11, 1986 ರಂದು ಜರುಗಿದ ಹತ್ತು ಕೇಂದ್ರೀಯ ಟ್ರೇಡ್ ಯೂನಿಯನ್ ಸಂಘಟನೆಗಳು ಸಂಘಟಿಸಿದ ಈ ಸಮಾವೇಶ ದೇಶದಲ್ಲಿ ಬೇರೆ ಬೇರೆ ರೂಪದಲ್ಲಿ ಕೋಮುವಾದಿ ಮತ್ತು ಮೂಲಭೂತವಾದಿ ಸಂಘಟನೆಗಳ ಆತಂಕಕಾರಿ ಬೆಳವಣಿಗೆಯ ಬಗ್ಗೆ ತನ್ನ ಅತೀವ ಆತಂಕವನ್ನು ವ್ಯಕ್ತಪಡಿಸುತ್ತದೆ. ಇಂತಹ ಸಂಘಟನೆಗಳು ಕ್ಷುಲ್ಲಕ ಪ್ರತ್ಯೇಕವಾದಿ ಭಾವನೆಗಳನ್ನು ಬಡಿದೆಬ್ಬಿಸುವ ಮೂಲಕ ವಿವಿಧ ಜನವಿಭಾಗ, ಜಾತಿ ಮತ್ತು ಕೋಮುಗಳ ನಡುವೆ ಘರ್ಷಣೆ, ವಿಭಜನೆಯನ್ನುಂಟುಮಾಡಿ ದೇಶದ ಐಕ್ಯತೆ ಮತ್ತು ಸಮಗ್ರತೆಯ ಎಳೆಗಳನ್ನು ದುರ್ಬಲಗೊಳಿಸುತ್ತಿವೆ. ಈ ಸಮಾವೇಶ ದೇಶದಲ್ಲಿ ಕೋಮುವಾದಿ ಘರ್ಷಣೆಯ ವೈಪರಿತ್ಯದಿಂದ ಆತಂಕಗೊಂಡಿದೆ ಪರಿಸ್ಥಿತಿ ಎಷ್ಟು ಹದಗೆಟ್ಟಿದೆಯೆಂಬುದು ಪಂಜಾಬಿನ ಘಟನೆಗಳಿಂದ ವ್ಯಕ್ತವಾಗುತ್ತದೆ. ಅಲ್ಲಿ ಪ್ರತ್ಯೇಕವಾದಿ ಶಕ್ತಿಗಳು ದೇಶದ ಐಕ್ಯತೆಯನ್ನು ನಾಶಗೊಳಿಸಲು ಪ್ರಯತ್ನಿಸುತ್ತಿವೆ

2. ಧಾರ್ಮಿಕ, ಜಾತಿವಾದಿ, ಇತರ ಅಂಧಾಭಿಮಾನಿ ಹಾಗೂ ಪ್ರತ್ಯೇಕವಾದಿ ಶಕ್ತಿಗಳ ಅಪಾಯದ ಬಗ್ಗೆ ಈ ಸಮಾವೇಶ ಕಾರ್ಮಿಕ ವರ್ಗಕ್ಕೆ ಎಚ್ಚರಿಕೆ ನೀಡುತ್ತದೆ. ಈ ಶಕ್ತಿಗಳು ವಿವಿಧ ಜನವಿಭಾಗಗಳ ನಡುವೆ ವೈಮನಸ್ಯ ತರುವ, ಉನ್ಮಾದ ಕೆರಳಿಸುವ, ಹಿಂಸಾಚಾರಕ್ಕಿಳಿಯುವಂತೆ ಮಾಡುವ ಯಾವುದೇ ಸಂದರ್ಭವನ್ನು ಬಿಟ್ಟುಕೊಡುತ್ತಿಲ್ಲ. ಈ ಬಗ್ಗೆ ಇದೇ ವರ್ಷ ಮಾರ್ಚ್ 22ರಲ್ಲಿ ಸೇರಿದ್ದ ಟ್ರೇಡ್ ಯೂನಿಯನ್‌ಗಳ ಜಂಟಿ ಸಭೆಯ ನಿರ್ಣಯಗಳನ್ನು ಈ ಸಮಾವೇಶ ಪುನರುಚ್ಚರಿಸುತ್ತದೆ. ಆ ನಿರ್ಣಯ ಇಂತಹ ಪ್ರಯತ್ನಗಳಿಗೆ ಹಲವು ಉದಾಹರಣೆಗಳನ್ನು ಎತ್ತಿತೋರಿಸುತ್ತದೆ. ಭಾರತದ ಸಂವಿಧಾನದ ಪರಮಾವಧಿಕಾರವನ್ನು ಮತ್ತು ಜಾತ್ಯಾತೀತತೆಯನ್ನು ಬುಡಮೇಲು ಮಾಡುವ ಯಾವುದೇ ರಿಯಾಯಿತಿಗಳನ್ನು ಎಂತಹ ಸಂದರ್ಭದಲ್ಲೂ ತೋರಿಸಬಾರದು ಎಂದು ಈ ಸಮಾವೇಶ ಖಡಾಖಂಡಿತವಾಗಿ ಹೇಳಬಯಸುತ್ತದೆ.

3. ಧಾರ್ಮಿಕ ಮತ್ತು ಪ್ರಾದೇಶಿಕ ಅಂಧಾಭಿಮಾನಿ ಮತ್ತಿತರ ಛಿದ್ರಕಾರಿ ಶಕ್ತಿಗಳ ಕಾರ್ಯಾಚರಣೆಗಳಿಂದಾಗಿ ಕೈಗಾರಿಕಾ ಕೇಂದ್ರಗಳಲ್ಲಿ ಹಿಂಸಾಚಾರದ ಘಟನೆಗಳು ಹೆಚ್ಚುತ್ತಿರುವ ಬಗ್ಗೆ ಈ ಸಮಾವೇಶ ಭೀತಿಗೊಂಡಿದೆ. ಈ ಘಟನೆಗಳು ತನ್ನ ಹಕ್ಕುಗಳಿಗೆ ಹೋರಾಟದಲ್ಲಿ ಕಾರ್ಮಿಕ ವರ್ಗದ ಒಗ್ಗಟ್ಟು, ಐಕ್ಯಮತ್ಯಕ್ಕೆ ಧಕ್ಕೆ ಉಂಟುಮಾಡುತ್ತವೆ.

4. ಹಿಂಸಾತ್ಮಕ ಕೋಮುವಾದಿ ಗಲಭೆಗಳನ್ನು ತಡೆಯುವಲ್ಲಿ ಆಡಳಿತಾತ್ಮಕ ದೋಷಗಳಿಂದಾಗಿ ದೇಶದ ಹಲವೆಡೆ ಸರ್ಕಾರಿ ಯಂತ್ರ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಸಮಾಜದ ದಟ್ಟದರಿದ್ರ ಮತ್ತು ತುಳಿತಕ್ಕೊಳಗಾದ ಜನವಿಭಾಗಗಳು—ಹರಿಜನರು ಮತ್ತು ಆದಿವಾಸಿಗಳು-ಇಂತಹ ಹಿಂಸಾಚಾರಕ್ಕೆ ಗುರಿಯಾಗುತ್ತಾರೆ. ಈ ಸಮಾವೇಶ ಆಡಳಿತವನ್ನು ಸಾರಾಸಗಟು ಚೊಕ್ಕಟಗೊಳಿಸಬೇಕು ಮತ್ತು ತಪ್ಪಿತಸ್ಥರನ್ನು ಉಗ್ರಶಿಕ್ಷೆಗೆ ಗುರಿಪಡಿಸಬೇಕೆಂದು ಒತ್ತಾಯಿಸುತ್ತದೆ.

5. ಈ ಸಮಾವೇಶ ಯಾವುದೇ ಧರ್ಮ, ಪ್ರದೇಶ, ಭಾಷೆ ಅಥವಾ ವರ್ಣದ ಮುಲಾಜಿಲ್ಲದೆ ಕೋಮುವಾದಿ ಮತ್ತಿತರ ಮಂಕು ಮಾಡುವ ಶಕ್ತಿಗಳಿಂದ ಕಷ್ಟ ನಷ್ಟಗಳಿಗೀಡಾಗಿರುವ ಎಲ್ಲಾ ಜನವಿಭಾಗಗಳಲ್ಲಿ ವಿಶ್ವಾಸ ಮೂಡಿಸುವ ಅಗತ್ಯವನ್ನು ಒತ್ತಿ ಹೇಳಬಯಸುತ್ತದೆ.

6. ಈ ಸಮಾವೇಶ ಕೆಲವು ವಿದೇಶಿ ಶಕ್ತಿಗಳು ಮತ್ತು ಸಂಘಟನೆಗಳು ಇಂತಹ ಒಡಕು ತರುವ ಶಕ್ತಿಗಳಿಗೆ ತೆರೆ ಮರೆಯಿಂದ ನೈತಿಕ ಮತ್ತು ಭೌತಿಕ ಬೆಂಬಲ ನೀಡುತ್ತಿರುವುದನ್ನು ಭೀತಿಯಿಂದ ಗಮನಿಸಿದೆ ಮತ್ತು ಇಂತಹ ಒಡಕುಕಾರಿ ಸಂಘಟನೆಗಳ ಬಗ್ಗೆ ಎಚ್ಚರಿಕೆಯಿಂದಿರಬೇಕೆಂದು ಕಾರ್ಮಿಕ ವರ್ಗಕ್ಕೆ ಕರೆ ಕೊಡುತ್ತದೆ.

7. ಭಾರತದಲ್ಲಿ ಟ್ರೇಡ್ ಯೂನಿಯನ್ ಚಳುವಳಿಗೆ ಜಾತಿ ಕೋಮುಗಳಿಗೆ ಹೊರತಾದ ಸಾಮಾನ್ಯ ಐಕ್ಯ ಹೋರಾಟಗಳನ್ನು ನಡೆಸಿದ ಹಲವು ವರ್ಷಗಳ ದೀರ್ಘ ಇತಿಹಾಸವಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಎಲ್ಲಾ ಕಾರ್ಮಿಕ ವರ್ಗದ ವಿಭಾಗಗಳನ್ನು ಒಟ್ಟಾಗಿ ತೊಡಗಿಸುವಲ್ಲಿ ಈ ಚಳುವಳಿ ಸಫಲವಾಗಿದೆ. ಅದರಿಂದಾಗಿ ಟ್ರೇಡ್ ಯೂನಿಯನ್ ಚಳುವಳಿಗೆ ಛಿದ್ರಕಾರಿ ಶಕ್ತಿಗಳ ವಿರುದ್ಧ ಮತ್ತು ರಾಷ್ಟ್ರೀಯ ಐಕ್ಯತೆ ಹಾಗೂ ಸಾಮಾಜಿಕ ಪ್ರಗತಿಗೆ ಹೋರಾಟ ನಡೆಸಿ ಮುಂದುವರಿಸಲು ಸೂಕ್ತ ಅರ್ಹತೆ ಇದೆ.

8. ಈ ಸಮಾವೇಶ ಸಾಮಾಜಿಕ, ಆರ್ಥಿಕ ಬದಲಾವಣೆಯ ಅತ್ಯಂತ ಪರಿಣಾಮಕಾರಿ ಉಪಕರಣವಾಗಿ ಟ್ರೇಡ್ ಯೂನಿಯನ್ ಪಾತ್ರವನ್ನು ಪುನರುಚ್ಚರಿಸುತ್ತದೆ. ದೇಶದ ಐಕ್ಯತೆ ಮತ್ತು ಕಾರ್ಮಿಕ ವರ್ಗದ ಸಹಭ್ರಾತೃತ್ವ ಇಂತಹ ಬದಲಾವಣೆಗೆ ಅತ್ಯಗತ್ಯ.

9. ಈ ಸಮಾವೇಶ ಎಲ್ಲಾ ಜನರಿಗೆ, ಅದರಲ್ಲೂ ಕಾರ್ಮಿಕ ವರ್ಗಕ್ಕೆ ವಿಶೇಷವಾಗಿ ಕೋಮುವಾದಿ ಮತ್ತಿತರ ದೇಶ ವಿರೋಧಿ, ಛಿದ್ರಕಾರಿ, ಒಡಕು ತರುವ, ಪ್ರತ್ಯೇಕವಾದಿಗಳನ್ನು ಹಾಗೂ ಭಯೋತ್ಪಾದಕರನ್ನು ಗುರುತಿಸಿ, ಬಯಲುಪಡಿಸಿ ದೂರವಿಡಬೇಕು. ಮತ್ತು ಯಾವುದೇ ಕೋಮಿನ ಧಾರ್ಮಿಕ ಭಾವನೆಗಳಿಗೆ ನೋವಾಗದಂತೆ ಇಂತಹ ಶಕ್ತಿಗಳ ಕುಟಿಲೋಪಾಯಗಳನ್ನು ನಿರರ್ಥಕಗೊಳಿಸಬೇಕು ಎಂದು ತಿಳಿಹೇಳಬಯಸುತ್ತದೆ.

10. ಈ ಸಮಾವೇಶ ಕೋಮು, ಜಾತಿ, ಧರ್ಮ ಅಥವಾ ಯಾವುದೇ ಇತರ ವಿಭಾಗೀಯ ಆಧಾರದ ಮೇಲೆ ಟ್ರೇಡ್ ಯೂನಿಯನ್ ಕಟ್ಟುವುದಕ್ಕೆ ವಿರುದ್ಧವಿದೆ ಮತ್ತು ಇಂತಹ ಶಕ್ತಿಗಳೊಂದಿಗೆ ಯಾವುದೆ ಸಂಬಂಧವಿಟ್ಟುಕೊಳ್ಳಲು ಟ್ರೇಡ್ ಯೂನಿಯನ್ ನಿರಾಕರಿಸಬೇಕು.

11. ಈ ಸಮಾವೇಶ ಎಲ್ಲಾ ಕಾರ್ಮಿಕರು ಮತ್ತು ಟ್ರೇಡ್ ಯೂನಿಯನ್‌ಗಳಿಗೆ ಆಗಸ್ಟ್ 9, 1986 ನ್ನು ರಾಷ್ಟ್ರೀಯ ಐಕ್ಯತಾ ದಿನವನ್ನಾಗಿ ಆಚರಿಸಬೇಕೆಂದು ಕರೆಕೊಡುತ್ತದೆ. ಈ ದಿನಾಚರಣೆಯಿಂದ ರಾಷ್ಟ್ರೀಯ ಐಕ್ಯತೆ ಮತ್ತು ಎಲ್ಲಾ ಬಣ್ಣಗಳ ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಸಂಘರ್ಷದ ಬಗ್ಗೆ ಜನತೆಯನ್ನು ಸತತವಾಗಿ ಪ್ರಜ್ಞಾಪೂರ್ಣವಾಗಿರಿಸಲು ಚಳುವಳಿಯನ್ನು ಆರಂಭಿಸಬೇಕು. ಅಷ್ಟರೊಳಗೆ ಈ ಉದ್ದೇಶಕ್ಕಾಗಿ ಜಂಟಿ ಸಮಾವೇಶಗಳು, ರ್‍ಯಾಲಿಗಳು, ಪ್ರದರ್ಶನಗಳು ಇತ್ಯಾದಿಗಳನ್ನು ಎಲ್ಲಾ ರಾಜ್ಯಗಳಲ್ಲಿ ಮತ್ತು ಕೈಗಾರಿಕಾ ಕೇಂದ್ರಗಳಲ್ಲಿ ಸಂಘಟಿಸಬೇಕು.

ಅಹಮದಾಬಾದಿನಲ್ಲಿ ಕೋಮು ಉನ್ಮಾದದ ರಥಯಾತ್ರೆ

ಕೋಮುವಾದಕ್ಕೆ ಉತ್ತೇಜನದ ಪ್ರಸಾದ

ಅಹ್ಮದಾಬಾದಿನಲ್ಲಿ "ರಥಯಾತ್ರೆ"ಯ ಸಂದರ್ಭದಲ್ಲಿ ಆರಂಭವಾದ ಗಲಭೆಗಳಲ್ಲಿ ಒಂದು ವಾರದಲ್ಲಿ ಚೂರಿ ಇರಿತ, ಪೋಲೀಸು ಗೋಳಿಬಾರು ಇತ್ಯಾದಿಗಳಿಂದ 50ಕ್ಕೂ ಹೆಚ್ಚು ಜನ ಸತ್ತಿದ್ದಾರೆ. ಆಸ್ತಿಪಾಸ್ತಿಗೂ ಅಪಾರ ನಷ್ಟವಾಗಿದೆ. ಗಲಭೆಗಳು ಆರಂಭವಾದ ಮತ್ತು ಬೆಳೆದ ರೀತಿ ನೋಡಿದರೆ ಇದು ಪೂರ್ಣವಾಗಿ ಪೂರ್ವನಿಯೋಜಿತ ಎನ್ನಿಸುತ್ತದೆ.

ಕೆಲವು ಪ್ರಮುಖ ಪತ್ರಿಕೆಗಳು ಗುಜರಾತಿನ ಕಾಂಗ್ರೆಸ್ ಐ ಭಿನ್ನಮತೀಯ ಗುಂಪು ಮಂತ್ರಿಮಂಡಲ ಶಿಥಿಲಗೊಳಿಸಲು ಮಾಡಿದ ಸಂಚಿನ ಫಲ ಎನ್ನುವವರೆಗೆ ಹೋಗಿವೆ. ಕಳೆದ 10–15 ವರ್ಷಗಳಲ್ಲಿ ಅಹ್ಮದಾಬಾದ್ ಹಲವು ಕೋಮು ಗಲಭೆಗಳನ್ನು ಕಂಡಿದೆ. ಕೋಮು ವಿಭಜನೆ ಆತಂಕಕಾರಿಯಾಗಿ ಬೆಳೆದಿದೆ. ಎಲ್ಲಾ ರೀತಿಯ ಧಾರ್ಮಿಕ ಆಚರಣೆಗಳಲ್ಲಿ ಭಾಗವಹಿಸುವಿಕೆ ಹೆಚ್ಚಿದೆ. ಈ ಹಿನ್ನೆಲೆಯಲ್ಲಿ ಗಲಭೆ ಪ್ರಾರಂಭವಾಗಲು ಯಾವುದೋ ಸಣ್ಣ ಪ್ರಚೋದನೆ ಸಾಕು. ಇಂತಹ ಪ್ರಚೋದನೆಗಳಿಗೆ ಅಹ್ಮದಾಬಾದಿನಲ್ಲಿ ಎಂದೂ ಬರವಿಲ್ಲ.

ಈ ಗಲಭೆಯಲ್ಲಿ ಸಹ ಇದೇ ನಡೆದಿದ್ದು ರಥಯಾತ್ರಾ ಕೆಲವು ಮುಸ್ಲಿಂ ಪ್ರದೇಶಗಳಿಂದ ಹಾದು ಹೋಗುತ್ತಿದ್ದಂತೆ ಮೆರವಣಿಗೆಯಲ್ಲಿದ್ದ ಕೆಲವು "ಭಕ್ತರು" ಉದ್ರೇಕಕಾರಿ ಘೋಷಣೆಗಳನ್ನು ಕೂಗಿದಾಗ ಗಲಭೆಗಳು ಆರಂಭವಾದವು. 70ರ ದಶಕದಲ್ಲಿ 20–48 ಮತ್ತು 80 ದಶಕದಲ್ಲಿ 70-90 ಕೋಮು ಗಲಭೆಗಳನ್ನು ಕಂಡಿರುವ ನಗರದಲ್ಲಿ ಕೆಲವು ಪ್ರದೇಶಗಳಲ್ಲಿ ಜನ ಇಂತಹ ಘಟನೆಗಳಿಗಾಗಿ ಸಜ್ಜಿತರಾಗಿರುತ್ತಾರೆ. ಕಲ್ಲು, ಸೀಮೆಎಣ್ಣೆಯಲ್ಲಿ ಅದ್ದಿದ ಪಂಜು, ಆ್ಯಸಿಡ್ ಬಲ್ಬು, ಕತ್ತಿ, ಚೂರಿಗಳು ಬಹಳಷ್ಟು ಮನೆಗಳಲ್ಲಿ ಸಿದ್ಧವಾಗಿರುತ್ತವೆ. ಹೆಂಗಸರು ಮತ್ತು ಮಕ್ಕಳು ಸಹ ಇವನ್ನು ಉಪಯೋಗಿಸುವ ಸಮಯ ಬಂದರೆ ಹಿಂಜರಿಯುವುದಿಲ್ಲ.

ಇಂತಹ ಉದ್ರೇಕಕಾರಿ ಪರಿಸ್ಥಿತಿಯಲ್ಲಿ ಸಾಕಷ್ಟು ಇಂತಹ ಘಟನೆ ನಡೆಯುವ ಸಾಧ್ಯತೆ ಬಗ್ಗೆ ಮಾಹಿತಿ ಇದ್ದರೂ ಪೋಲೀಸರು ರಥಯಾತ್ರೆಯಲ್ಲಿ ನಡೆಸಲು ಅದರಲ್ಲೂ ಮುಸ್ಲಿಂ ಮೊಹಲ್ಲಾಗಳನ್ನು ಹಾದು ಹೋಗಲು ಅನುಮತಿ ಕೊಟ್ಟಿದ್ದು ಅತಿ ದೊಡ್ಡ ಪ್ರಮಾದ. ಇದಕ್ಕೆ ಗುಜರಾತಿನ ಕಾಂಗ್ರೆಸ್[ಐ]ಸರ್ಕಾರ ಹೊಣೆ ಗಲಭೆಗಳು ನಡೆದ ಮೇಲೂ ಪೋಲೀಸರು ನಡೆದುಕೊಂಡ ರೀತಿ ಪೋಲೀಸರ ನಿರ್ಲಿಪ್ತ ಕಾನೂನು ವ್ಯವಸ್ಥೆಯ ಬಲ ಎಂದು ಜನರು ವಿಶ್ವಾಸ ಕಳೆದುಕೊಳ್ಳುವಂತಿದೆ.

ಪೋಲೀಸು ಬಹುಮತೀಯ ಕೋಮಿನ ಪರ, ನಮ್ಮನ್ನು ಕೇಳುವವರಿಲ್ಲ ಎಂಬುದು ಅಲ್ಪ ಮತೀಯ ಕೋಮಿನ ಜನರ ಸಾಮಾನ್ಯ ಭಾವನೆ ಹಾಗೂ ಅನುಭವ ಕೂಡಾ. ಹಿಂದೂ ಕೋಮು ಉನ್ಮಾದ ಪ್ರದರ್ಶನದ ರಥಯಾತ್ರೆಯಲ್ಲಿ ಮುಖ್ಯಮಂತ್ರಿಗಳೇ ಭಾಗವಹಿಸಿದ್ದರು ಎಂದು ಹೇಳಲಾಗಿದೆ. ಕಾಂಗ್ರೆಸ್-ಐ ನ ಕೋಮುವಾದಕ್ಕೆ ಉತ್ತೇಜನದ ಧೋರಣೆಗೆ ಇದಕ್ಕಿಂತ ಹೆಚ್ಚಿನ ಪುರಾವೆ ಬೇಕೆ? ಗುಜರಾತಿನಲ್ಲಿ ಇತ್ತೀಚೆಗೆ ಅನುಸರಿಸುತ್ತಿರುವ ವಿವಿಧ ವಿಚ್ಛಿದ್ರಕಾರಿ ರಾಜಕೀಯ ನೀತಿಗಳಿಂದ ಬೇರೆಯಾಗಿ ಕೋಮು ಗಲಭೆಗಳನ್ನು ನೋಡುವುದು ಕಷ್ಟ. ಪುನಃಪಿ ನಡೆದಿರುವ ಕೋಮುಗಲಭೆಗಳು ಅಹ್ಮದಾಬಾದಿನ ಸಮಾಜವನ್ನು ಛಿದ್ರಗೊಳಿಸಿದೆ.

ಗಾಂಧೀಜಿಯವರ ಸಬರ್‌ಮತಿ ಆಶ್ರಮ ಇರುವ ಈ ನಗರ ದೇಶದ ದೊಡ್ಡ ಕೈಗಾರಿಕಾ ಕೇಂದ್ರಗಳ ಒಂದು. ಟ್ರೇಡ್ ಯೂನಿಯನಿಗೆ ಧೀರ್ಘ ಇತಿಹಾಸ ಇರುವ ನಗರಗಳಲ್ಲೊಂದು ಆದರೂ ಟ್ರೇಡ್ ಯೂನಿಯನ್‌ಗಳು ಈವರೆಗೆ ಯಾವುದೇ ಪರಿಣಾಮಕಾರಿ ರೀತಿಯಲ್ಲಿ ಮಧ್ಯಪ್ರವೇಶ ಮಾಡಲಾಗಿಲ್ಲ. ಇದರ ಅಗತ್ಯ ಹಿಂದೆಂದಿಗಿಂತಲೂ ಹೆಚ್ಚಿದೆ.

ಎಸ್.ಎಫ್.ಐ. ಸಮಾವೇಶ

ಎಸ್. ಎಫ್. ಐ. ರಾಜ್ಯ ಸಮಿತಿಯ ಕರೆಯಂತೆ ಬಳ್ಳಾರಿಯಲ್ಲಿ ಎಸ್. ಎಫ್. ಐ. ಜಿಲ್ಲಾ ಮಟ್ಟದ ಕಾರ್ಯಕರ್ತರ ಸಮಾವೇಶವು ಜುಲೈ 18 ರಂದು ನಡೆಯಿತು. ಸಮಾವೇಶದಲ್ಲಿ ನೂತನ ಶಿಕ್ಷಣ ನೀತಿಯ ಕುರಿತು ಎಸ್. ಎಫ್. ಐ. ನ ಜಿಲ್ಲಾ ಕಾರ್ಯದರ್ಶಿ ಹಾಗೂ ರಾಜ್ಯ ಉಪಾಧ್ಯಕ್ಷರಾದ ಕಾ. ಗುರುಶಾಂತ್ ಮಾತಾನಾಡಿದರು. ಎಸ್. ಎಫ್. ಐ. ನ ಧ್ಯೇಯೋದ್ದೇಶಗಳ ಬಗ್ಗೆ ಕಾ. ಗಂಗಾಧರ್ ಶಿಕ್ಷಣ, ಸಮಾಜ ಮತ್ತು ರಾಜಕೀಯ ಸಂಬಂಧಗಳ ಬಗ್ಗೆ ಜಿಲ್ಲಾ ಅಧ್ಯಕ್ಷ ಕಾ. ಪ್ರಸನ್ನಕುಮಾರ್ ಮಾತಾನಾಡಿರುವುದಾಗಿ ವರದಿಯಾಗಿದೆ.

ಮಾಸ್ಕೋದಿಂದ ಬರೆದೋಲೆಗಳು—3

ಸೋವಿಯತ್ ದೇಶದಲ್ಲಿ ನೈರ್ಮಲ್ಯ, ಆರೋಗ್ಯ ಮತ್ತು ವಿದ್ಯಾಭ್ಯಾಸ

ರಶ್ಯಾ ದೇಶದ ಮುಖ್ಯ ಪಟ್ಟಣ, ನಗರ ಮತ್ತಿತರ ಕಡೆ ಸರ್ವೇ ಸಾಮಾನ್ಯವಾಗಿ ವಿಶಾಲವಾದ ರಸ್ತೆಗಳಿವೆ. ಮಾಸ್ಕೋ ನಗರದಲ್ಲಿ ಎಲ್ಲ ರಸ್ತೆಗಳೂ ಯಾವಾಗ ನೋಡಿದರೂ ಸ್ವಚ್ಛವಾಗಿರುತ್ತವೆ. ವಾಹನಗಳು ತಿರುಗಾಡುವುದು ರಸ್ತೆಯ ಮಧ್ಯಭಾಗದಲ್ಲಿ ಒಂದೊಂದು ಬದಿಯಲ್ಲಿ ಏಕ ಕಾಲದಲ್ಲಿ 4ಅಥವಾ 5 ವಾಹನಗಳು ಒಂದೇ ಸಮನಾಗಿ ಸಾಗಬಹುದು. ಈ ಬದಿಗಳ ಮಧ್ಯದಲ್ಲಿ ರಸ್ತೆಗಳುದ್ದಕ್ಕೂ ಸಾಲು ಗಿಡಗಳಿಂದ ಕೂಡಿದ ಒಂದು ರಸ್ತೆ ಇರುತ್ತದೆ. ವಾಹನಗಳು ತಿರುಗಾಡುವ ಪಕ್ಕದಲ್ಲಿ ಸ್ಥಳಾವಕಾಶವನ್ನು ಬಿಟ್ಟು ಪಾದಚಾರಿಗಳು ಸರಾಗವಾಗಿ ತಿರುಗಾಡಲು ವಿಶಾಲವಾದ ರಸ್ತೆ. ಈ ರಸ್ತೆಯ ಎರಡು ಬದಿಯಲ್ಲೂ ಸಾಲು ಗಿಡಗಳೂ ಪಾದಚಾರಿಗಳು ತಿರುಗಾಡುವ ರಸ್ತೆಯ ಪಕ್ಕದಲ್ಲಿ ಪುನಃ ಸ್ಥಳಾವಕಾಶ ಬಿಟ್ಟು ಸಾಲು ಅಂಗಡಿಗಳಿಗ ಹೋಗಿ ವ್ಯಾಪಾರ ಮಾಡುವವರು ತಿರುಗಾಡುವ ರಸ್ತೆ. ಈ ರಸ್ತೆಗಳೆಲ್ಲಾ ಡಾಂಬರು ಹಾಕಿದ ರಸ್ತೆಗಳು. ಪಾದಚಾರಿಗಳು ತಿರುಗಾಡುವ ಸ್ಥಳದಲ್ಲಿ ಅಲ್ಲಲ್ಲಿ ಬೆಂಚುಗಳು, ಪಕ್ಕಗಳಲ್ಲಿ ಕಸ ಕಡ್ಡಿಗಳನ್ನು ಹಾಕಲು ಡಬ್ಬಗಳು. ಪಾದಚಾರಿಗಳು ಒಂದು ಬದಿಯಿಂದ ಇನ್ನೊಂದು ಬದಿಗೆ ದಾಟಬೇಕಾದರೆ ರಸ್ತೆಗಳನ್ನು ದಾಟುವ ಪ್ರಶ್ನೆಯಿಲ್ಲ ಭೂಮಿಯ ಒಳಗೆ ಸಬ್‌ವೇಗಳನ್ನು ಮಾಡಿದ್ದಾರೆ. ಅಲ್ಲೇ ಪಾದಚಾರಿಗಳು ಹೋಗಬೇಕು.

ಎಲ್ಲ ರಸ್ತೆಗಳಿಗೂ ರಾತ್ರಿ ವೇಳೆ ಬೆಳಕು ಹರಿಯುವ ಹೊತ್ತಿಗೆ ನೀರನ್ನು ಹಾಯಿಸುತ್ತಾರೆ. ನೀರು ಹೊತ್ತ ಲಾರಿಯ ಚಾಲಕನೊಬ್ಬನೆ ಯಂತ್ರದ ಸಹಾಯದಿಂದ ಗುಂಡಿಯನ್ನು ಒತ್ತುವುದರ ಮೂಲಕ ಬೇಕಷ್ಟು ಪ್ರಮಾಣ ಮತ್ತು ರಭಸದಿಂದ ನೀರನ್ನು ಹಾಯಿಸಿಕೊಂಡು ಹೋಗುತ್ತಾನೆ. ಇದೇ ವೇಳೆಯಲ್ಲಿ ಅಲ್ಲಲ್ಲಿ ರಸ್ತೆಗಳಲ್ಲಿ ಬಿದ್ದಿರುವ ಕಸವನ್ನು ಗುಡಿಸಿ ಹಾಕಲು ಕಾರ್ಮಿಕರು ಈ ಕರ್ತವ್ಯದಲ್ಲಿ ತೊಡಗಿರುತ್ತಾರೆ. ಇವರ ಕೆಲಸ ಕಸ ಗುಡಿಸಿ ಡಬ್ಬಗಳಿಗೆ ಹಾಕುವುದು ಮಾತ್ರ. ಹಾಗೆ ತುಂಬಿದ ಡಬ್ಬಗಳನ್ನೆಲ್ಲಾ ಹೊತ್ತು ಲಾರಿಗಳಲ್ಲಿ ಜೋಡಿಸಿಕೊಂಡು ದೂರ ಸಾಗಿಸಲು ಪ್ರತ್ಯೇಕ ಲಾರಿಗಳು ಇವೆ. ಡಬ್ಬಗಳನ್ನು ಎತ್ತಿ ಲಾರಿಗೆ ಜೋಡಿಸಿಕೊಳ್ಳುವ ಕೆಲಸವೂ ಯಂತ್ರದ ಸಹಾಯದಿಂದ ಲಾರಿ ಚಾಲಕನೇ ಮಾಡಿಕೊಳ್ಳುತ್ತಾನೆ. ರಸ್ತೆಬದಿಯಲ್ಲಿರುವವುಗಳನ್ನು ಎತ್ತಲೂ ಸಹ ಕೆಲಸದ ದೈಹಿಕ ಶ್ರಮವು ಬೇಕಿಲ್ಲ ಈ ಕೆಲಸವೂ ಇದಕ್ಕಾಗಿ ಸಜ್ಜಾದ ಯಂತ್ರದ ಜೋಡಣೆಯ ಲಾರಿಗಳೇ ಈ ಕೆಲಸ ಮಾಡುತ್ತವೆ.

ಯಾವ ಕಟ್ಟಡವೇ ಆಗಲಿ, ಹೊಟೆಲ್, ವಾಸದ ಮನೆ, ಅಂಗಡಿಗಳು ಎಲ್ಲವೂ ಯಾವಾಗಲೂ ಸ್ವಚ್ಛವಾಗಿರುತ್ತವೆ. ಈ ಸ್ವಚ್ಛತೆಯ ಕೆಲಸದಲ್ಲಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು, ಕಾರ್ಖಾನೆಗಳ ಕೆಲಸಗಾರರು ನಿವೃತ್ತಿ ಹೊಂದಿದ ಕೆಲಸಗಾರರು, ಹೆಂಗಸರು ಮತ್ತು ಗಂಡಸರು ಕೂಡ ಆಗಿರುತ್ತಾರೆ.

ಎಂ. ಎನ್. ಉಗ್ರಪ್ಪ

ಸರ್ಕಾರದ ನಿರ್ಲಕ್ಷದಿಂದಾಗಿ ಜನರಿಗೆ ಯಾವ ತೊಂದರೆಯೂ ಆಗಬಾರದೆಂಬ, ರೋಗಗಳು ಉದ್ಭವವಾಗಿ ಹರಡಬಾರದೆಂಬ ಉದ್ದೇಶದಿಂದ ಸರ್ಕಾರದ ಇಲಾಖೆ ಜನರ ಆರೋಗ್ಯವನ್ನು ಕಾಪಾಡಲು ಇಷ್ಟು ಮುತುವರ್ಜಿ ವಹಿಸಿ ಶ್ರಮ ಪಡುವುದನ್ನು ಸಮಾಜವಾದಿ ಸಮಾಜದಲ್ಲಿ ಮಾತ್ರ ಕಾಣಬಹುದು.

ರಶ್ಯದ ಯಾವ ಪ್ರಜೆಯೂ ದೇಹಾಲಸ್ಯ ಉಂಟಾದಲ್ಲಿ ಅವನಿಗೆ ಆರೋಗ್ಯ ಕೆಟ್ಟಿದ್ದಲ್ಲಿ ಅವನು ಉಚಿತ ವೈದ್ಯಕೀಯ ಸೌಲಭ್ಯಗಳನ್ನು ಪಡೆಯಬಹುದಾದ ವ್ಯವಸ್ಥೆಯನ್ನು ಈ ದೇಶದಲ್ಲಿ ಕಾಣಬಹುದು. ಆಯಾ ಕಾರ್ಖಾನೆಗೆ ಮತ್ತು ಉದ್ದಿಮೆಗಳಿಗೆ ಸಂಬಂಧಿಸಿದಂತೆ ದವಾಖಾನೆಗಳು, ಆಸ್ಪತ್ರೆಗಳು ಇವೆ. ಅಲ್ಲಿ ಉಚಿತ ವೈದ್ಯಕೀಯ ಸೌಲಭ್ಯಗಳನ್ನು ಪಡೆಯಬಹುದಲ್ಲದೆ ಅವನ ಸಂಬಳ ಸಹಿತ ತನ್ನ ಉದ್ದಿಮೆಯಲ್ಲಿ ರಜೆಯನ್ನೂ ಪಡೆದುಕೊಳ್ಳಬಹುದು. ಯಾವ ರೋಗಿಯನ್ನೇ ಆಗಲಿ ಅವನನ್ನು ಅಮೂಲಾಗ್ರವಾಗಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ನಂತರ ಸೂಕ್ತ ಔಷಧೋಪಚಾರವನ್ನು ಮಾಡುತ್ತಾರೆ. ಅವನ ಹಿಂದಿನ ಔಷಧೋಪಚಾರದ ದಾಖಲೆಗಳನ್ನು ಆಗಲೇ ತೆಗೆದು ಪರಿಶೀಲಿಸುತ್ತಾರೆ. ಆಸ್ಪತ್ರೆಗಳಿದ್ದರೂ ಅವುಗಳಿಗೆ ಹೋಗುವ ಅಲ್ಲಿ ದಾಖಲಾಗುವ ರೋಗಿಗಳ ಸಂಖ್ಯೆ ತೀರಾ ಕಡಿಮೆ ಎಂದು ಹೇಳಬಹುದು. ಆಸ್ಪತ್ರೆಗಳಲ್ಲಿ ಎಲ್ಲಾ ತರಹದ ರೋಗಗಳ ಪರೀಕ್ಷೆಗೆ ಆಧುನಿಕ ಯಂತ್ರಗಳಿಂದ ಸಜ್ಜಾಗಿರುತ್ತವೆ.

ರಶ್ಯದ ಯುವ ಜನಾಂಗವನ್ನು ಮುಂದಿನ ಯೋಗ್ಯ ಪ್ರಜೆಯನ್ನಾಗಿ ಅದರಲ್ಲೂ ಸಮತಾವಾದದ ಸಾಧನೆಗೆ ಶ್ರಮಿಸುವಲ್ಲಿ ಯೋಗ್ಯ ಮುಂದಾಳುವಾಗಿ ರೂಪಿಸಲು ಶಾಲಾಕಾಲೇಜುಗಳು ನಿರ್ಮಿತವಾಗಿವೆ. ಕಾರ್ಖಾನೆಗಳಲ್ಲಿ ದುಡಿಯುವ ಕಾರ್ಮಿಕರ ಮಕ್ಕಳಿಗೆ (ಎಳೆವಯಸ್ಸಿನವರಿಗೆ) ಕಾರ್ಖಾನೆಗಳಿಗೆ ಸಂಬಂಧಿಸಿದ ವಿಶಾಲವಾದ ಪ್ರದೇಶದಲ್ಲಿ ಆಟ, ಪಾಠ, ಕಲಿಕೆಗೆ ಎಲ್ಲಾ ತರಹದ ಆಟದ ಸಾಮಾನುಗಳಿಂದ ಕೂಡಿದ ಶಾಲೆಗಳಿರುತ್ತವೆ. ಪ್ರಾಥಮಿಕ, ಪ್ರೌಢ, ಮತ್ತು ಉನ್ನತ ವಿದ್ಯಾಭ್ಯಾಸಗಳಿಗೆ ಹೋಗುವ ವಿದ್ಯಾರ್ಥಿಗಳಿಗೆ ಸರ್ಕಾರದ ವಿದ್ಯಾ ಇಲಾಖೆಯೇ ಎಲ್ಲ ಸೌಲಭ್ಯಗಳನ್ನು ಒದಗಿಸಿ ವಿದ್ಯೆಯನ್ನು ಕೊಡುತ್ತದೆ. ಹೊರದೇಶಗಳಿಂದ ವಿದ್ಯಾರ್ಥಿಗಳು ಇಲ್ಲಿಯ ವಿಶ್ವವಿದ್ಯಾನಿಲಯಗಳಿಗೆ ಮತ್ತು ತಾಂತ್ರಿಕ ಶಾಲೆಗಳಿಗೆ ಬಂದು ತಮ್ಮ ವಿದ್ಯಾಭ್ಯಾಸವನ್ನು ನಡೆಸುತ್ತಾರೆ.

ತಾಂತ್ರಿಕ ಶಾಲೆಗಳಿಗೆ ಯಾವ ವಿಭಾಗದ ಕಾರ್ಮಿಕನಾದರೂ ತನಗೆ ಅಭಿರುಚಿಯಿರುವ ತಂತ್ರಜ್ಞಾನವನ್ನೇ ಅಭ್ಯಾಸಮಾಡಿ ಕಲಿಯಲಿಕ್ಕೆ ಅವಕಾಶವಿದೆ. ತಾನು ಕೆಲಸ ಮಾಡುವ ಉದ್ದಿಮೆಯಲ್ಲಿ ಇದಕ್ಕೆ ಅವಕಾಶವನ್ನು ಕಲ್ಪಿಸಿಕೊಡುತ್ತಾರೆ. ವಿದ್ಯಾಭ್ಯಾಸವೂ ತಾನು ಬಯಸುವ ಉದ್ಯೋಗಕ್ಕೆ ಅನುಗುಣವಾಗಿರುತ್ತದೆ. ತಾಂತ್ರಿಕ ವಿದ್ಯಾಭ್ಯಾಸವನ್ನು ಮುಗಿಸುತ್ತಿದ್ದಂತೆಯೇ ಈ ವಿದ್ಯಾಭ್ಯಾಸಕ್ಕೆ ಯೋಗ್ಯವಾಗುವ ಉದ್ಯೋಗವು ಸಿದ್ಧವಾಗಿರುತ್ತವೆ. ವಿದ್ಯಾಭ್ಯಾಸ ಮಾಡುವಾಗ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ದೊರೆಯುತ್ತದೆ. ವಿದ್ಯಾಭ್ಯಾಸಕ್ಕೆ ಅಡಚಣೆಯಾಗದಂತೆ ಸ್ಥಳಾವಕಾಶವನ್ನೂ ಕಲ್ಪಿಸಿಕೊಡುತ್ತಾರೆ. ಉದ್ಯೋಗದಲ್ಲಿ ಕಲಿಯಲಿಕ್ಕೆ ರಾತ್ರಿ ಶಾಲೆಗಳನ್ನು ನಡೆಸುತ್ತಾರೆ

ಮಾಸ್ಕೊ ನಗರದಲ್ಲಿ ವಾಹನ ಸಂಪರ್ಕ ಅತ್ಯಕ್ರಮವಾಗದೆ. ಕಡಮೆ ದರದಲ್ಲಿ ಎಲ್ಲಿಂದ ಎಲ್ಲಿಗೆ ಬೇಕಾದರೂ ಓಡಾಡಬಹುದು ಕಂಡಕ್ಟರುಗಳೂ ಟಿಕೆಟ್ ವಿತರಣೆ ಮಾಡುವವರು, ಟಿಕೇಟ್ ಪಡೆಯುವವರು, ಟಿಕೇಟ್ ಚಕ್ ಮಾಡುವವರು ಯಾರೂ ಇಲ್ಲದೆ ಬಸ್, ಟ್ರಾಂಬಸ್ ಟ್ರಾಂಕಾರು ರೈಲು ಓಡಾಡುತ್ತವೆ. ದಿನ ಒಂದಕ್ಕೆ ಸುಮಾರು 5 ಕೋಟಿ ಜನರ ಸಂಚಾರ ಮಾಸ್ಕೊ ನಗರದಲ್ಲಿ ಆಗುತ್ತದೆ. ಚಿಲ್ಲರೆ ನಾಣ್ಯಕ್ಕೆ ಪರದಾಡುವುದೇ ಬೇಕಿಲ್ಲ, ನಿಮಗೆ ಬೇಕಾದ ಚಿಲ್ಲರೆ ನಾಣ್ಯ ದೊರೆಯಲು ಅಲ್ಲಲ್ಲಿ ಯಂತ್ರಗಳಿವೆ.ಅವುಗಳಿಗೆ ನಿಮಗೆ ಬೇಕಾದ ಚಿಲ್ಲರೆ ನಾಣ್ಯಗಳಿಗೆ ಅವಶ್ಯಕವಾದ ನಾಣ್ಯವನ್ನು ಆ ಯಂತ್ರದಲ್ಲಿ ಹಾಕಿದರೆ ಅದಕ್ಕೆ ಸಮನಾದ ನಾಣ್ಯ ದೊರೆಯುತ್ತದೆ. ರಶ್ಯದಲ್ಲಿ ಕೂಲಿಯವರು ನಿಮ್ಮ ಸಾಮಾನುಗಳನ್ನು ಹೊರುವುದಕ್ಕೆ ಸಿಗುವುದಿಲ್ಲ. ಎಷ್ಟೇ ಭಾರವಾದರೂ ನೀವೇ ನಿಮ್ಮ ಸಾಮಾನುಗಳನ್ನು ಹೊರಬೇಕು ಇಲ್ಲವೆ ಟ್ರಾಲಿಗಾಡಿಗಳನ್ನು ಬಳಸಿ ಸಾಮಾನುಗಳನ್ನು ನೀವು ಹೋದೆಡೆಗಳಲ್ಲಿ ಸರಾಗವಾಗಿ ಎಳೆದುಕೊಂಡು ಹೋಗಬಹುದು.

○

ಮೈಕೋದಲ್ಲಿ ಕಾರ್ಮಿಕ ಸಂಘಕ್ಕೆ ಚುನಾವಣೆ

ಇತ್ತೀಚೆಗೆಬೆಂಗಳೂರಿನ ಅನೇಕ ಪ್ರಮುಖಕಾರ್ಖಾನೆಗಳಲ್ಲಿಕಾರ್ಮಿಕಸಂಘಗಳಿಗೆ ಚುನಾವಣೆಗಳು ನಡೆದಿವೆ ಮೈಸೂರು ಕಿರ್ಲೋಸ್ಕರ್, ಮೈಕೋ ಬಿ. ಎಚ್. ಇ. ಎಲ್. (ರೆಂಮ್ಕೋ) ಇತ್ಯಾದಿ, ಈ ಚುನಾವಣೆಗಳೆಲ್ಲವೂ ಬೆಂಗಳೂರಿನ ಕಾರ್ಮಿಕ ವರ್ಗದ ಆಸಕ್ತಿಯನ್ನು ಕೆರಳಿಸಿದ್ದವು. ಆದರೆ ಪ್ರತ್ಯೇಕ ಕಾರಣಗಳಿಗಾಗಿ.

ಈ ಚುನಾವಣೆ ನಡುವೆ ಮೈಕೋ ಕಾರಖಾನೆಯ ಕಾರ್ಮಿಕ ಸಂಘದಲ್ಲಿ ಚುನಾವಣೆ ಅನೇಕ ರೀತಿಯಲ್ಲಿ ಭಿನ್ನವಾಗಿತ್ತು ಮತ್ತು ಬಹಳ ಜನ ಕಾರ್ಮಿಕರ ಕುತೂಹಲವನ್ನು ಕೆರಳಿಸಿತ್ತು.

ಹೊರಗಿನವರು ಕಾರ್ಮಿಕ ಸಂಘಗಳಿಗೆ ಬೇಡ ಅಲ್ಲಿಯ ಕಾರ್ಮಿಕರೇ ನಾಯಕರಾಗಿರಬೇಕು. ಎಂಬ ಟಾಟಾ, ಬಿರ್ಲಾಗಳ ವಾದವನ್ನು ಮುಂದೊಡ್ಡಿದ ತಂಡವೇ ಮೈಸೂರು ಕಿರ್ಲೋಸ್ಕರ್‌ನಲ್ಲಿ ಜಯಗಳಿಸಿದ್ದರ ಹಿನ್ನಲೆಯಲ್ಲಿ ಮೈಕೋ ಕಾರ್ಖಾನೆಯಲ್ಲಿ ಕೂಡ ಇದೇ ವಾದವನ್ನು ಪ್ರತಿಪಾದಿಸುತ್ತಾ ಜೊತೆಗೆ ಕಾರ್ಮಿಕರಿಗೆ ರಾಜಕೀಯ ಬೇಡ ಅಂತರರಾಷ್ಟ್ರೀಯ ರಾಷ್ಟ್ರೀಯ ರಾಜಕಾರಣದ ಬೆಳವಣಿಗೆಗಳ ಬಗ್ಗೆ ಮಾತನಾಡುವುದಕ್ಕೆ ಕಾರ್ಮಿಕ ಸಂಘದ ವೇದಿಕೆಗಳು ಉಪಯೋಗವಾಗಬಾರದು ಎಂದು ವಾದಿಸುತ್ತಿದ್ದ ತಂಡವೊಂದು ಚುನಾವಣೆಗೆ ಸ್ಪರ್ಧೆ ಮಾಡಿತು. ಈ ತಂಡದಲ್ಲಿ ಹಿಂದೆ 2-3 ವರ್ಷಗಳ ಕಾಲ ಕಾರ್ಮಿಕರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಧಿಕ್ಕರಿಸಿ ನಡೆದಿದ್ದ ಎಫ್. ಎಂ. ಖಾನ್‌ನ ಬೆಂಬಲಿಗರೂ, ಬಿಜೆಪಿಯ ನಗರಸಭಾ ಸದಸ್ಯ ಹಾಗೂ ಇತರ ಬೆಂಬಲಿಗರೂ, ಕಾಂಗ್ರೆಸ್ (ಐ) ಬೆಂಬಲಿಗರೂ, ಜನತಾ ಬೆಂಬಲಿಗರ ಒಂದು ವಿಭಾಗವೂಸೇರಿದ ಒಕ್ಕೂಟವಾಗಿತ್ತು.

ಈ ತಂಡಕ್ಕೆ ಚುನಾವಣೆಯ ಮುನ್ನಾದಿನ ಜನತಾಪಕ್ಷದ ಕಾರ್ಮಿಕ ಸೇಲ್‌ನ ಆನಂದರೆಡ್ಡಿಯವರಿಂದ, ಲೋಕಸಭಾ ಸದಸ್ಯ, ವಿ. ಎಸ್, ಕೃಷ್ಣ ಐಯ್ಯರ್, ಶಾಸಕ ಎಂ. ಎಸ್. ನಾರಾಯಣರಾವ್ ರವರ ಭಾವ ಚಿತ್ರ ಬಳಸಿದ ಕರಪತ್ರ ಕೂಡ ಬಂತು.

ವಿಶಿಷ್ಟ ಸಂಗತಿಯೆಂದರೆ ಜನತಾ ಪಕ್ಷದ ಅನೇಕ ಬೆಂಬಲಿಗರು ಕಾಂ. ಸೂರ್ಯನಾರಾಯಣ ರಾವ್‌ರವರನ್ನು ಅಧ್ಯಕ್ಷತೆಗೆ ಸೂಚಿಸಿದ ತಂಡದಲ್ಲೂ ಇದ್ದದ್ದು.

ಚುನಾವಣೆ ಪ್ರಚಾರ ಬಿರುಸಿನಿಂದ ನಡೆದು ವಿರೋಧಿ ತಂಡ 7–8 ಹಸ್ತಪತ್ರಿಕೆಗಳಲ್ಲಿ ಕುತ್ಸಿತ ಅಪಪ್ರಚಾರವನ್ನು ಮಾಡಿದರು. ಹಸ್ತಪತ್ರಿಕೆಗಳ ಒಂದು ಯುದ್ಧವೇ ನಡೆಯಿತು. ಈ ಚುನಾವಣೆ ಹುಟ್ಟಿಸಿದ್ದ ಕಾವಿಗೆ ಒಂದು ಸೂಚನೆಯೆಂದರೆ 3–4 ಲಕ್ಷಕ್ಕೂ ಮೌಲ್ಯದ ವಸ್ತುಗಳನ್ನು ಕಾರ್ಮಿಕರು ಯಾರು ಗೆಲ್ಲುವರೆಂದು ಪಣವಾಗಿ ಒಡ್ಡಿದ್ದು.

20–6–84 ರಲ್ಲಿ ಎರಡು ವರ್ಷದ ಹಿಂದೆ ಚುನಾವಣೆ ನಡೆದಾಗ ಕಾಂ. ಸೂರ್ಯನಾರಾಯಣರಾವ್‌ರವರ ತಂಡ 2900 ರಿಂದ 3000 ಮತಗಳನ್ನು ಪಡೆದರೆ ಈ ಚುನಾವಣೆಯಲ್ಲಿ 3100 ರಷ್ಟು ಮತ ಪಡೆಯಿತು. ಹಿಂದೆ ಸ್ಪರ್ಧಿಸಿದ್ದ ವಿರೋಧಿ ತಂಡ 1900 ಮತಗಳನ್ನು ಪಡೆದಿದ್ದರೆ ಇಂದು ಸ್ಪರ್ಧಿಸಿದ್ದ ತಂಡ 1725 ಮತಗಳನ್ನು ಪಡೆಯಿತು. ಚುನಾಯಿತರಾದ ಪದಾಧಿಕಾರಿಗಳು.–

ಕಾಂ. ಎಸ್. ಸೂರ್ಯನಾರಾಯಣ ರಾವ್ (ಅಧ್ಯಕ್ಷರು) ಕಾ. ಶೇಷಪ್ಪ (ಉಪಾಧ್ಯಕ್ಷರು) ಕಾಂ.ವೀರಾಸ್ವಾಮಿ ಪ್ರಧಾನ ಕಾರ್ಯದರ್ಶಿ, ಕಾಂ. ಜಯರಾಂ ಸಹ ಕಾರ್ಯದರ್ಶಿ, ಕಾಂ. ಶಂಕರೇಗೌಡ (ಖಜಾಂಚಿ)

ಈ ಹೊಸ ಜವಳಿ ನೀತಿ ಯಾರಿಗಾಗಿ?

3ನೇ ಪುಟದಿಂದ

ಕೊನೆಪಕ್ಷಶೇಕಡಾ20ರಷ್ಟಾದರೂ ಹತ್ತಿಯನ್ನು ಸೇರಿಸಿ ಬಟ್ಟೆ ತಯಾರಿಸ ಬೇಕೆಂದಿದ್ದ • ನೀತಿಯನ್ನು ಸರ್ಕಾರ ಕೈ ಬಿಟ್ಟಿದೆ. ಅಲ್ಲದೆ ಶೇಕಡಾನೂರಕ್ಕೆ ನೂರರಷ್ಟು ಸಿಂಥೆಟಿಕ್ ಎಳೆಗಳನ್ನು ಬಳಸಲು ಅನುಮತಿ ನೀಡಿದೆ.

ಕೇಂದ್ರ ಸರ್ಕಾರದ ಈ ನೀತಿಯು ಹತ್ತಿ ಬೆಳೆಗಾರರನ್ನು ಧ್ವಂಸ ಮಾಡುತ್ತಿದೆ. ಈಗಾಗಲೇ ಹತ್ತಿಯ ಬೆಳೆಯಿಲ್ಲದೆ ಕಂಗಾಲಾಗಿರುವ ಹತ್ತಿ ಬೆಳೆಗಾರರು ಹತ್ತಿಗೆ ಬೆಲೆ ಇಲ್ಲದೆ ತೀರ ಅಪಾಯದ ಅಂಚನ್ನು ತಲುಪಿದ್ದಾರೆ.

ವಿಸ್ಕೋಸ್ ತಯಾರಕರ ಅದರಲ್ಲೂ ಬಿರ್ಲಾರವರ ಲಾಭಾಂಶವನ್ನು ಕಾಪಾಡಲು ಇಂತಹ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

ವಿದ್ಯುತ್‌ಚಾಲಿತ ಮಗ್ಗಗಳ ಗತಿ

ಇಲ್ಲಿಯವರೆಗೆ ವಿದ್ಯುತ್‌ಚಾಲಿತ ಬಟ್ಟೆ ಗಿರಣಿಗಳು ಹೊಂದಿದ್ದ ಅಬ್ಕಾರಿ ಸುಂಕ ರಿಯಾಯತಿಯನ್ನು ರದ್ದು ಮಾಡಿರುವ ಕೇಂದ್ರ ಸರ್ಕಾರ, ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ವಿದ್ಯುತ್‌ಚಾಲಿತ ನಿರ್ಭಂದನೆಯನ್ನು ಹೇರಿದೆ. ಕೇಂದ್ರ ಸರ್ಕಾರದ ಹೊಸ ಜವಳಿ ನೀತಿಯು ಬೆಂಗಳೂರಿನಲ್ಲಿರುವ ರೇಷ್ಮೆ ನೇಯುವವರ ಕಸುಬನ್ನೇ ನಾಶ ಮಾಡಿದಂತಾಗಿದೆ.

ವಿದ್ಯುತ್ ಚಾಲಿತ ಕೈಗಾರಿಕೆಯನ್ನು ನಾಶ ಮಾಡಿ ಈ ವಿದ್ಯುತ್ ಚಾಲಿತ ನೇಯ್ಗೆಗಾರರನ್ನು ಗಿರಣಿ ರಂಗದಿಂದಲೇ ಹೊರಹಾಕುವುದಲ್ಲದೆ, ವಿಕೇಂದ್ರಿಕೃತವಾದ ವಿದ್ಯುತ್ ಚಾಲಿತ ಕೈಗಾರಿಕೆಗಳಲ್ಲಿ ಕೆಲಸವನ್ನು ಅರಸುವ ಅವಕಾಶವನ್ನು ಕೂಡ ಕಸಿದುಕೊಂಡಿದೆ ಕೇಂದ್ರ ಸರ್ಕಾರ.

ದೊಡ್ಡ ಗಿರಣಿ ಮಾಲೀಕರಿಗೆ ಇಂತಹ ಸಣ್ಣ ಪುಟ್ಟ ಗಿರಣಿಗಳಿಂದ ಸ್ಪರ್ಧೆ ಇರದಂತೆ ನೋಡಿ ಕೊಳ್ಳುವ ಒಂದೇ ಒಂದು ಉದ್ದೇಶದಿಂದ ಈ ಕ್ರಮವನ್ನು ಕೇಂದ್ರ ಸಕಕಾರ ತೆಗೆದುಕೊಂಡಿದೆ.

ಆಧುನೀಕರಣ ಮತ್ತು ರಫ್ತು ಯೋಗ್ಯವಾದ ಬಟ್ಟೆಗಳನ್ನು ಮಾತ್ರ ತಯಾರಿಸ ಬೇಕೆನ್ನುವ ದೊಡ್ಡ ಬಂಡವಾಳಶಾಹಿಗಳ ಎಲ್ಲ ಬೇಡಿಕೆಗಳನ್ನು ಒಪ್ಪಿಕೊಂಡ ಕೇಂದ್ರ ಸರ್ಕಾರವು ಬಡಜನರಿಗೆ ಬೇಕಾಗುವ ಬಟ್ಟೆಯನ್ನು ಕೈಮಗ್ಗ ಕೈಗಾರಿಕೆಯಲ್ಲಿರುವ ಬಡ ಜನರೇ ತಯಾರಿಸಲಿ ಎಂದುಬಯಸಿದೆ

ಮೈಸೂರು ಮಿಲ್ ಮತ್ತು ಮಿನರ್ವ ಮಿಲ್‌ಗಳಲ್ಲಿ

ಮೈಸೂರು ಮಿಲ್ ಮತ್ತು ಮಿನರ್ವ ಮಿಲ್‌ಗಳು ಈ ಎರಡೂ ರಾಷ್ಟ್ರೀಕೃತ ಜವಳಿ ಗಿರಣಿಗಳ ಕಾರ್ಮಿಕರ ಮೇಲೆ ತೀವ್ರವಾದ ದಾಳಿಯನ್ನು ಕೇಂದ್ರ ಸರ್ಕಾರ ನಡೆಸಿದೆ ಈ ಗಿರಣಿಗಳಲ್ಲಿ ಕೆಲಸ ಮಾಡುತ್ತಿರುವ ಸುಮಾರು 3000 ಕಾರ್ಮಿಕರನ್ನು ಬೀದಿ ಪಾಲು ಮಾಡಬೇಕೆಂಬ ಹವಣಿಕೆ ಹಗಲಿರುಳು ನಡೆಯುತ್ತಿದೆ.

ವಾರದಲ್ಲಿ ಆರು ದಿನಗಳು ಮತ್ತು ಎರಡು ಪಾಳಿಗಳಲ್ಲಿ ಮಾತ್ರ ಕೆಲಸ ಎಂಬುದನ್ನು ಪ್ರಾರಂಭಿಸಿ ಉದ್ಯೋಗಾವಕಾಶವನ್ನು ಕಡಿಮೆ ಮಾಡುವ ಪ್ರಯತ್ನಗಳು ನಡೆಯುತ್ತಲೇ ಇವೆ. ಈ ಕ್ರಮಗಳು ಎರಡೂ ಗಿರಣಿಗಳಲ್ಲಿ ಕೆಲಸ ಮಾಡುತ್ತಿರುವ ಅರ್ಧದಷ್ಟು ಜನರನ್ನು ನಿರುದ್ಯೋಗಿಗಳನ್ನಾಗಿ ಮಾಡತ್ತದೆ. ದಿನಗೂಲಿ ಕೆಲಸಗಾರರು ಮತ್ತು ಸಿ.ಐ.ಟಿ.ಯು. ಸಂಘಟನೆಗಳ ಸಂಘಟಿತ ವಿರೋಧದಿಂದಾಗಿ ವಾರಕ್ಕೆ ಆರು ದಿನಗಳನ್ನು ಪ್ರಾರಂಭಿಸಬೇಕೆಂದಿದ್ದ ಆಡಳಿತ ವರ್ಗದವರ ಪ್ರಯತ್ನವನ್ನು ತಡೆಯಿಡಿಯಲಾಗಿದೆ. "ಕೆಲಸ ಇಲ್ಲ" "ಅನೈತಿಕ ಕಾರ್ಖಾನೆ ಮುಚ್ಚುವಿಕೆ", "ಒಪ್ಪಂದಗಳನ್ನು ಉಲ್ಲಂಘಿಸುವುದು" ಮುಂತಾದ ಕಾರ್ಮಿಕ ವಿರೋಧಿ ಕ್ರಮಗಳನ್ನು ಆಡಳಿತವರ್ಗ ಅನುಸರಿಸುತ್ತದೆ.

ಈ ಎರಡೂ ಗಿರಣಿಗಳಲ್ಲಿ ಖಾಲಿ ಬಿದ್ದಿರುವ ಹುದ್ದೆಗಳನ್ನು ಭರ್ತಿಮಾಡಬಾರದೆಂದು ಕೇಂದ್ರ ಸರ್ಕಾರ ಸುತ್ತೋಲೆಯನ್ನು ಕಳಿಸಿದೆ. ಈ ಗಿರಣಿಗಳಲ್ಲಿ ಕೆಲಸ ಮಾಡುತ್ತಿರುವ ಸಾವಿರಕ್ಕೂ ಹೆಚ್ಚಿನ ಕೆಲಸಗಾರರು ಖಾಯಂ ಆಗುವ ಹಕ್ಕನ್ನು ಈ ಸುತ್ತೋಲೆ ಕಸಿದುಕೊಂಡಿದೆ. ಕಾನೂನು ಕಾಯಿದೆಗಳಿಗೆ ಗೌರವ ಕೊಡವ ಈ ಆಡಳಿತ ವರ್ಗದವರು ಕಾರ್ಮಿಕ ವಿರೋಧಿ ಧೋರಣೆಯನ್ನು ಅನುಸರಿಸುತ್ತಿದ್ದಾರೆ. ಕಾರ್ಮಿಕರನ್ನು ಲೇ ಆಫ್ ಮಾಡಿದ ಸಂದರ್ಭದಲ್ಲಿ ಕೂಡ ಕೆಲಸಗಳನ್ನು ಗುತ್ತಿಗೆಗೆ ನೀಡುತ್ತಿದ್ದಾರೆ. ರಾಜ್ಯ ಸರ್ಕಾರದ ಅನುಮತಿ ಇಲ್ಲದೆ ಲೇ ಆಫ್ ಘೋಷಿಸುವುದು, ಒಪ್ಪಂದಗಳನ್ನು ಉಲ್ಲಂಘಿಸುವುದು ಮುಂತಾದ ಕಾನೂನು ವಿರೋಧಿ ಕ್ರಮಗಳನ್ನು ಆಡಳಿತ ವರ್ಗ ತೆಗೆದುಕೊಳ್ಳುತ್ತಿದ್ದರೂ, ಇಂತಹ ಕ್ರಮಗಳ ವಿರುದ್ಧ ಆಡಳಿತ ವರ್ಗವನ್ನು ತರಾಟೆಗೆ ತೆಗೆದುಕೊಳ್ಳಬೇಕಾದ ಕರ್ನಾಟಕ ರಾಜ್ಯ ಸರ್ಕಾರ ಕೈಕಟ್ಟಿ ಕುಳಿತಿದೆ.

ಒಂದು ಪಾಳಿಯಲ್ಲಿ ಈಗಾಗಲೇ ಕೆಲಸ ಮಾಡುತ್ತಿರುವ 13 ಜನರ ಬದಲು ಕೇವಲ 8 ಜನರ ಕಾರ್ಮಿಕರು ಸಾಕಾಗುತ್ತದೆ ಎಂಬ ವಾದವನ್ನು ಬಿನ್ನಿ ಗಿರಣಿಯವರು ಈಗಾಗಲೇ ಮುಂದಿಟ್ಟಿದ್ದಾರೆ. ಅದರರ್ಥ ಒಂದು ಪಾಳಿಯಲ್ಲಿ ಕೆಲಸ ಮಾಡುತ್ತಿರುವ ಕೊನೆಪಕ್ಷಐದು ಕಾರ್ಮಿಕರು ತಮ್ಮ ಕೆಲಸ ಕಳೆದುಕೊಳ್ಳಬೇಕಾಗುತ್ತದೆ.

ಜವಳಿ ನೀತಿಯನ್ನು ಹಿಮ್ಮೆಟ್ಟಿಸಿ

ಜವಳಿ ಕೈಗಾರಿಕೆಯಲ್ಲಿ ಕೆಲಸ ಮಾಡುತ್ತಿರುವ ಎಲ್ಲರೂ ಒಟ್ಟುಗೂಡಿ ಕೇಂದ್ರ ಸರ್ಕಾರದ ಜವಳಿ ನೀತಿಯ ವಿರುದ್ಧ ಹೋರಾಟವಮಾಡಿ ಕೇಂದ್ರ ಸರ್ಕಾರದ ಜನವಿರೋಧಿ, ಕಾರ್ಮಿಕ ವಿರೋಧಿ ನೀತಿಯನ್ನು ಹಿಮ್ಮೆಟಸದಿದ್ದರೆ ಮೈಸೂರು ಮತ್ತು ಮಿನರ್ವ ಮಿಲ್ಲುಗಳಲ್ಲಿಯ ಮೂರು ಸಾವಿರ ಕಾರ್ಮಿಕರ ಹಿತಾಸಕ್ತಿಯನ್ನಾಗಲಿ, ಬಿನ್ನಿಮಿಲ್ಲಿನಲ್ಲಿ ಕೆಲಸ ಮಾಡುತ್ತಿರುವ, ಖಂಡಿತವಾಗಿ ಕೆಲಸ ಕಳೆದುಕೊಳ್ಳಲಿರುವ ಸಾವಿರಕ್ಕೂ ಹೆಚ್ಚು ಕಾರ್ಮಿಕರ ಹಿತಾಸಕ್ತಿಯನ್ನು ಯಾರೂ ಕಾಪಾಡಲು ಸಾಧ್ಯವಾಗುವುದಿಲ್ಲ.

ಈ ಒಂದು ಹಿನ್ನೆಲೆಯಲ್ಲಿಯೇ ಸಿ.ಐ.ಟಿ.ಯು. ಸಂಘಟನೆಯು ಒಂದು ಕ್ರಿಯಾ ಸಮಿತಿಯನ್ನೂ ನೇಮಿಸಿದೆ. ಗುಂಪು ಕೆಲಸ, ಬಹಿರಂಗ ಸಭೆಗಳು, ಜಾತಾ, ಪ್ರತಿಭಟನಾ ಸಭೆಗಳು ಮತ್ತು ಕೊನೆಗೆ ಜವಳಿ ಕೈಗಾರಿಕೆಯನ್ನು ಒಂದು ದಿನ ಬಂದ್ ಮಾಡುವ ಎಲ್ಲಾ ಕಾರ್ಯಕ್ರಮಗಳನ್ನು ಈ ಕ್ರಿಯಾ ಸಮಿತಿ ಹಮ್ಮಿಕೊಂಡಿದೆ.

ವಿದ್ಯುತ್ ಚಾಲಿತ ಮಗ್ಗಗಳ ಮಾಲೀಕರ ಸಂಘಗಳನ್ನೊಳಗೊಂಡು ಉಳಿದ ಎಲ್ಲಾ ಸಂಘಟನೆಗಳನ್ನು ಸಿ.ಐ.ಟಿ.ಯು. ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಸ್ವಾಗತಿಸುತ್ತದೆ. ಕೇಂದ್ರ ಸರ್ಕಾರದ ಜನ ವಿರೋಧಿ ನೀತಿಯನ್ನು ಹಿಮ್ಮೆಟ್ಟಿಸಲು ಈ ಚಳುವಳಿಯಲ್ಲಿ ಎಲ್ಲರೂ ಭಾಗವಹಿಸುವ ಅನಿವಾರ್ಯತೆ ಈಗ ಹಿಂದೆಂದಿಗಿಂತಲೂ ಹೆಚ್ಚಾಗಿದೆ ಎಂದು ಹತ್ತಿ ಗಿರಣಿ ಕಾರ್ಮಿಕರ ಹೋರಾಟ ಸಮಿತಿ ತಿಳಿಸಿದೆ.

○

ಪರಿಹಾರ ಕಾಮಗಾರಿ ಪುನರಾರಂಭಿಸಲು ಸಿ. ಪಿ. ಐ (ಎಂ) ಶಾಸಕರ ಆಗ್ರಹ

ಕೋಲಾರ ಜಿಲ್ಲೆಯನ್ನು ಕ್ಷಾಮ ಪೀಡಿತವೆಂದು ಸಾರಿ ಪರಿಹಾರ ಕಾಮಗಾರಿಯನ್ನು ಕೂಡಲೇ ಪುನರಾರಂಭಿಸಬೇಕೆಂದು ಮುಳುಬಾಗಲು ಸಿ.ಪಿ.ಐ. (ಎಂ)ನ ಶಾಸಕರಾದ ಕಾ. ಆರ್. ವೆಂಕಟರಾಮಯ್ಯ ಅವರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಕೋಲಾರ ಜಿಲ್ಲೆಯಲ್ಲಿ ಮಳೆಯ ಅಭಾವದಿಂದಾಗಿ ಬಿತ್ತನೆ ಕೆಲಸ ಸ್ಥಗಿತವಾಗಿದೆಯೆಂದೂ, ಜಿಲ್ಲೆಯ ಕೃಷಿ ಕಾರ್ಮಿಕರು, ಬಡ ರೈತರೂ ಇದರಿಂದ ಕಂಗಾಲಾಗಿದ್ದಾರೆಂದೂ, ಪರಿಹಾರ ಕಾಮಗಾರಿಯನ್ನು ಸರ್ಕಾರ ಜೂನ್ ತಿಂಗಳಿಗೇ ನಿಲ್ಲಿಸಿರುವುದು ತುಂಬಾ ಅನ್ಯಾಯ ಹಾಗೂ ದೂರಾಲೋಚನೆಯಿಲ್ಲದ್ದು ಎಂದು ಅಭಿಪ್ರಾಯ ಪಟ್ಟಿರುವ ಶಾಸಕರು ಜಿಲ್ಲೆಯಲ್ಲಿನ ಅಭಾವ ಪರಿಸ್ಥಿತಿಯನ್ನು ಗಮನಿಸಿ ಬಡ ರೈತರಿಗೆ, ಕೃಷಿ ಕೂಲಿಕಾರರಿಗೆ, ಸಹಾಯ ಒದಗಿಸಲು ಕೂಡಲೇ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕೆಂದು ರಾಜ್ಯ ಸರ್ಕಾರವನ್ನು ಅಗ್ರಹಪಡಿಸಿದ್ದಾರೆ. ●

ಸೋವಿಯತ್ ಯೂನಿಯನ್ ಪ್ರವಾಸ ಅನುಭವ ವಿವರಣಾ ಸಭೆಗಳು

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಮೈಸೂರು ಜಿಲ್ಲಾ ಕಾರ್ಯದರ್ಶಿಗಳೂ, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರೂ ಆಗಿರುವ ಕಾಂ. ಎಂ. ಎಸ್. ಉಗ್ರಪ್ಪನವರು 35 ದಿನಗಳ ಕಾಲ ಸೋವಿಯತ್ ಪ್ರವಾಸ ನಡೆಸಿದ್ದರು. ಅಲ್ಲಿನ ಕಾರ್ಮಿಕ ಸಂಘಟನೆಯ ಸೌಹಾರ್ದ ಆಹ್ವಾನದ ಮೇರೆಗೆ ಭೇಟಿ ನೀಡಿದ್ದ ಕಾಂ॥ ಉಗ್ರಪ್ಪನವರು ಸೋವಿಯತ್ ಯೂನಿಯನ್ನಿನಲ್ಲಿ ತಾವು ಕಂಡಜನಜೀವನ, ಅಲ್ಲಿನ ಪ್ರಗತಿ ಬಗ್ಗೆ ಮೈಸೂರು ಜಿಲ್ಲೆಯ ವಿವಿಧ ಭಾಗಗಳಲ್ಲಿ ನಡೆದ ಸಭೆಗಳಲ್ಲಿ ವಿವರಿಸಿದರು.

ಜುಲೈ 18ರಂದು ಚಾಮರಾಜನಗರದಲ್ಲಿ ಬೀಡಿ ಕಾರ್ಮಿಕ ಸಂಘದ ಆಶ್ರಯದಲ್ಲಿ, 19ರಂದು ಮೈಸೂರು ನಗರದ ಅಧ್ಯಯನ ಕೂಟದ ಸಭೆಯಲ್ಲಿ, 20 ರಂದು ಹುಣಸೂರಿನಲ್ಲಿ ಎಸ್.ಎಫ್.ಐಡಿ; ವೈ ಎಫ್.ಐ. ಹಾಗೂ ರೈತ ಸಂಘದಆಶ್ರಯದಲ್ಲಿ, 24ರಂದು ಮೈಸೂರಿನ ಪುರಭವನದಲ್ಲಿ ಸಿ. ಐ. ಟಿ. ಯು. ಹಾಗು 25 ರಂದು ಗುಂಡ್ಲಪೇಟೆಯಲ್ಲಿ "ಜಾಗೃತ ವೇದಿಕೆ" ಆಶ್ರಯದಲ್ಲಿ ನಡೆದ ಸಭೆಗಳಲ್ಲಿ ಉಗ್ರಪ್ಪನವರು ತಮ್ಮ ಅನುಭವವನ್ನು ಸಭಿಕರೊಂದಿಗೆ ಹಂಚಿಕೊಂಡರು. ಅವರ ಪ್ರಶ್ನೆಗಳಿಗೆ ಉತ್ತರಿಸಿದರೆಂದು ವರದಿಯಾಗಿದೆ.

ವಿಕ್ರಾಂತ್ ಸರ್ವಸದಸ್ಯರ ಸಭೆ ;

24-7-86 ರಂದು ವಿಕ್ರಾಂತ್ ಟೈರ್ಸ್ ಕಾರ್ಮಿಕರ ಸಂಘದ ಸರ್ವ ಸದಸ್ಯರ ಸಭೆಯು ಪುರಭವನದಲ್ಲಿ ನಡೆಯಿತು. ಸಂಘದ ಕಾನೂನು ಸಲಹೆಗಾರರಾದ ಎಸ್. ಸೂರ್ಯನಾರಾಯಣ ರಾವ್ ಸಭೆಯಲ್ಲಿ ಭಾಗವಹಿಸಿದ್ದರು. ಈ ವರ್ಷ 15.33 o/o ಬೋನಸ್ ಪಡೆದಿರುವ ಬಗ್ಗೆ ಕಾರ್ಮಿಕರಲ್ಲಿ ಸಿ.ಐ.ಟಿ ಯು. ಬಗ್ಗೆ ಅಭಿಮಾನ ಮೂಡಿಸಿದೆಯೆಂದು ತಿಳಿದುಬಂದಿದೆ.

ರಾಯಚೂರು :

ಡಿ.ವೈ.ಎಫ್.ಐ. ಘಟಕದ ರಚನೆ

ಜುಲೈ 24 ರಂದು ರಾಯಚೂರು ನಗರದಲ್ಲಿ ಸರ್ವಸದ್ಯಸರ ಸಭೆ ಸೇರಿ ರಾಯಚೂರು ನಗರ ಘಟಕವನ್ನು ಪುನರ್ ರಚಿಸಲಾಯಿತು.

ಸಭೆಯಲ್ಲಿ ಭಾಗವಹಿಸಿದ್ದ ಡಿ.ವೈ.ಎಫ್.ಐ ನ ರಾಜ್ಯ ಕಾರ್ಯದರ್ಶಿ ಎಸ್. ಶಿವರಾಂರವರು ವಿಶ್ವಶಾಂತಿಗಾಗಿ ಹೋರಾಟ, ಕೇಂದ್ರ ಸರ್ಕಾರದ ಹೊಸ ಶಿಕ್ಷಣ ನೀತಿ, ಉದ್ಯೋಗವನ್ನು ಕಬಳಿಸುವ ಕಂಪ್ಯೂಟರ್ಸ್ ಹಾಗೂ ಮೈಸೂರಿನ ರಾಜ್ಯ ಸಮಿತಿಯ ಸಭೆಯ ತೀರ್ಮಾನಗಳನ್ನು ವಿವರಿಸಿದರು. ರಾಯಚೂರು ಜಿಲ್ಲಾ ಸಂಚಾಲಕ ಕಾ. ರಾಘವೇಂದ್ರ ಕುಷ್ಟಗಿ ಅವರು ಮಾತನಾಡುತ್ತ ಮಹಂತ ಸ್ವಾಮಿಗಳ ವಿರೋಧಿ ಹೋರಾಟ, ಕೊಳಚೆ ನಿವಾಸಿಗಳ ಹೋರಾಟಗಳ ಬಗ್ಗೆ ಹೇಳಿದರು.

ಪುನರ್ ರಚಿತವಾದ ನಗರ ಸಮಿತಿಯಲ್ಲಿ ಶಿವಕುಮಾರಿ, ಪಾರ್ವತಮ್ಮ, ಶರೀಫ್ ಉದ್ದೀನ್, ಮಹಾದೇವ, ಅಂಜನಿ, ಬಸವರಾಜು, ಸಂಜೀವ, ಡಾ॥ ಎಸ್. ಕುಮಾರ್, ಚಂದ್ರಕಲಾ, ತಿಮ್ಮಾರೆಡ್ಡಿ, ಬಾಬುರಾವ್, ಅಸ್ಕರ್, ಮೋಹಿನ್ ಪಾಷ, ಗೆದ್ದಪ್ಪ ಪೂಜಾರ್, ಶರಣಪ್ಪ, ಶಾಂತಪ್ಪ ಸದ್ಯಸರುಗಳಾಗಿ ಮತ್ತು ಶಿವಮೂರ್ತಿ ಸಂಚಾಲಕರಾಗಿ, ರಾಜಶೇಖರ್ ಸಹ ಸಂಚಾಲಕರಾಗಿ, ಕಮಲ ಬಾಳಿ ಖಜಾಂಚಿಯಾಗಿ ಆಯ್ಕೆಯಾಗಿದ್ದಾರೆ.

ಚೀಣಾ: ಜನತೆಗಾಗಿ ಆಧುನಿಕ ತಂತ್ರಜ್ಞಾನ

ಜುಲೈ 1 ರಂದ ಚೀಣಾದ ಟೆಲಿವಿಶನ್‌ನಲ್ಲಿ ಶಿಕ್ಷಣ ನೀಡುವುದಕ್ಕಾಗಿಯೇ ಹೊಸ ವಿಭಾಗವೊಂದನ್ನು ಆರಂಭಿಸಲಾಗಿದೆ. ಇದರ ಮೂಲಕ ೪೦ ಲಕ್ಷ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲಾ ಶಿಕ್ಷಕರ ಮಟ್ಟವನ್ನು ಎತ್ತರಿಸಲು ಅವರಿಗೆ ಆಧುನಿಕ ವಿಜ್ಞಾನದ ತಿಳುವಳಿಕೆ ನೀಡಲು ಪ್ರಯತ್ನಿಸಲಾಗುವುದು ಎಂದು ಚೀಣಾದ ಶಿಕ್ಷಣ ಆಯೋಗದ ನಿರ್ದೇಶಕ ಹಾಗೂ ಉಪಪ್ರಧಾನಿ ಲೀ ಪಿಂಗ್ ಹೇಳಿದ್ದಾರೆ ಈಗಾಗಲೆ ದೇಶಾದ್ಯಂತ ಸ್ಥಾಪನೆಗೊಂಡಿರುವ ಟಿ. ವಿ. ನಿಲಯಗಳು ಹಾಗೂ ಇತರ ಅಗತ್ಯ ಉಪಕರಣಗಳು ದೇಶದಲ್ಲೇ ಉತ್ಪಾದನೆಯಾಗುತ್ತಿರುವುದರಿಂದ ಒಂದು ಸಣ್ಣ ಶಾಲೆ ಕೂಡ ಅಲ್ಲಿನ ಸ್ಥಳೀಯ ಆಡಳಿತ ಸಂಸ್ಥೆಗಳ ನೆರವಿನಿಂದ ಈ ಕಾರ್ಯಕ್ರಮದ ಪೂರ್ಣ ಉಪಯೋಗ ಪಡೆಯಬಹುದು.

ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಚೀಣಾ ಈ ಶಿಕ್ಷಣದ ರಂಗದಲ್ಲಿ ಟಿ ವಿ. ಯನ್ನು ಬಳಸುತ್ತಿರುವುದು ಒಂಬತ್ತು ವರ್ಷ ಕಡ್ಡಾಯ ಸಾರ್ವತ್ರಿಕ ಶಿಕ್ಷಣದ ತನ್ನ ಕಾರ್ಯಕ್ರಮವನ್ನು ಶೀಘ್ರನಿಂದ ಪರಿಣಾಮಕಾರಿಯಾಗಿ ಜಾರಿಗೆ ತರುವುದಕ್ಕಾಗಿ. ಇನ್ನೊಂದು ಅಂಶವೆಂದರೆ ಈ ಟಿ. ವಿ ಶಿಕ್ಷಣ ವಿದ್ಯಾರ್ಥಿಗಳಿಗೆ ಅಲ್ಲ, ಶಿಕ್ಷಕರಿಗಾಗಿ. ಇದರೊಂದಿಗೆ ನಮ್ಮ ಹೊಸ ಶಿಕ್ಷಣ ನೀತಿಯ ಧೋರಣೆಗಳನ್ನು ಹೋಲಿಸಿ ನೋಡಿ ನಮ್ಮಲ್ಲೂ ದೂರದರ್ಶನವನ್ನು ಶಿಕ್ಷಣಕ್ಕಾಗಿ ಬಳಸಲಾಗುವುದಂತೆ. ಆದರೆ ಇದು ಕಡ್ಡಾಯವಾಗಿ ಎಲ್ಲರಿಗೂ ಶಿಕ್ಷಣ ನೀಡುವುದಕ್ಕಾಗಿ ಅಲ್ಲ. ಹೊಸ ನೀತಿಯಲ್ಲಿ ಹೆಚ್ಚು ಪ್ರಾಥಮಿಕ ಶಾಲೆಗಳನ್ನು ಒದಗಿಸಿ ಆ ಶಾಲೆಗಳಲ್ಲಿ ಹೆಚ್ಚು ಕಲಿಯುವಂತೆ ಮಾಡುವ ಪ್ರಯತ್ನವಿಲ್ಲ. ಮತ್ತೆ ಶಿಕ್ಷಕರ ಮಟ್ಟ ಎತ್ತರಿಸಲಿಕ್ಕಾಗಿಯೇ? ಖಂಡಿತಾ ಅಲ್ಲ.

ಮುಂದೆ ನಿಂತು ವಿದ್ಯಾರ್ಥಿಗಳ ಓದು ಬರಹಗಳನ್ನು ಗಮನಿಸಿ ಶಿಕ್ಷಣ ನೀಡುವದಕ್ಕೆ ಉಪಾಧ್ಯಾಯರ ಬದಲಾಗಿ ಒಂದು ಯಂತ್ರವನ್ನು ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆಯೇ ಇಲ್ಲವೇ ಎಂದು ತಿಳಿಯಲಾಗದ, ಮಾನವೀಯ ಸಂಬಂಧಗಳನ್ನು ಮುರಿದ ಒಂದು ಯಂತ್ರವನ್ನು ಸ್ಥಾಪಿಸಲು ಯತ್ನಿಸಿದ್ದಾರೆ. ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸುವ, ಶಾಲಾ ಕಟ್ಟಡ, ಶಾಲಾ ಉಪಕರಣಗಳನ್ನೊದಗಿಸುವ ಶಿಕ್ಷಕರನ್ನು ನೇಮಿಸಿ ನಿರುದ್ಯೋಗ ನಿವಾರಣೆ ಮಾಡುವುದರ ಜೊತೆಗೆ ಉತ್ತಮ ಶಿಕ್ಷಣವನ್ನು ನೀಡುವ ಹೊಣೆಯಿಂದ ಜಾರಿಕೊಳ್ಳುವ ಉದ್ದೇಶ ನಮ್ಮ ದೇಶದ ಬಂಡವಾಳಶಾಹಿ ಭೂಮಾಲೀಕ ವರ್ಗಗಳದ್ದು. ಹೀಗ ಉಳಿಸಿದ ಹಣವನ್ನು ತಮ್ಮ ಲಾಭವನ್ನು ಹೆಚ್ಚು ಮಾಡುವ ಉದ್ದೇಶಗಳಿಗಾಗಿ ಬಳಸಿಕೊಳ್ಳುವ ಉದ್ದೇಶ ಈ ಆಳುವ ವರ್ಗಗಳದ್ದು.

ಆಧುನಿಕ ತಂತ್ರಜ್ಞಾನವೊಂದನ್ನು ಎರಡು ಪರಸ್ಪರ ವಿಭಿನ್ನ ವ್ಯವಸ್ಥೆಗಳು ಹೇಗೆ ವಿಭಿನ್ನ ಉದ್ದೇಶಗಳಿಗಾಗಿ ಬಳಸಿಕೊಳ್ಳಬಹುದು ಎಂಬುದಕ್ಕೆ ಈ ಟಿ.ವಿ. ಶಿಕ್ಷಣ ಇನ್ನೊಂದು ಉದಾಹರಣೆ.

ಅಂತರ್ರಾಷ್ಟ್ರೀಯ

ಇಟಲಿ: ಒತ್ತಡ ತಂತ್ರ ಫಲಿಸಿತು

ಇಟಲಿ ಈಗ ರೇಗನ್‌ರ "ತಾರಾಯುದ್ಧ" ಯೋಜನೆಗೆ ಸೇರಿಕೊಂಡ ಮೂರನೇ ದೇಶವಾಗಿದೆ. ಪಶ್ಚಿಮ ಜರ್ಮನಿ ಹಾಗೂ ಬ್ರಿಟನ್ "ತಾರಾಯುದ್ಧಕ್ಕೆ" ಈಗಾಗಲೇ ಸೇರಿರುವ ಉಳಿದೆರಡು ದೇಶಗಳು. ಇಟಲಿಯ ಸರಕಾರದ ಈ ನಿರ್ಧಾರ ಅಮೇರಿಕನ್ ಆಳುವ ವಲಯಗಳ ಒತ್ತಡ ತಂತ್ರದ ಇತ್ತೀಚಿನ ಉದಾಹರಣೆ.

ಕಳೆದ ಮಾರ್ಚ್ ತಿಂಗಳಲ್ಲಿ ಇಟಾಲಿಯನ್ ಸರ್ಕಾರ ಇಟಲಿಯ ಕೈಗಾರಿಕಾ ಕಂಪನಿಗಳು ರೇಗನ್‌ರ "ತಾರಾಯುದ್ಧ" ಯೋಜನೆಯನ್ನು ಜಾರಿಗೆ ತರುವ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅವಕಾಶ ನೀಡಿತು. ಇದರಿಂದ ಇಟಾಲಿಯನ್ ಕೈಗಾರಿಕೆಗೆ ವೈಜ್ಞಾನಿಕ ಹಾಗೂ ತಾಂತ್ರಿಕ ಪ್ರಯೋಜನಗಳಿವೆಯೆಂದು ಈ ನಿರ್ಧಾರ ಕೈಗೊಳ್ಳಲಾಯಿತಂತೆ.

ಆದರೆ ವಾಶಿಂಗ್ಟನ್‌ನ ಆಳುವ ವಲಯದ ಜನಕ್ಕೆ ಬೇಕಾದುದು ಇದಲ್ಲ. ಇಟಲಿ ರೇಗನ್‌ರ "ತಾರಾಯುದ್ಧ"ಕ್ಕೆ ರಾಜಕೀಯ ಬೆಂಬಲ ನೀಡಬೇಕೆಂಬುದು ಅವರ ಇಚ್ಛೆ. ಅದಕ್ಕನುಸಾರವಾಗಿ ತಮ್ಮ ಒತ್ತಡ ತಂತ್ರವನ್ನು ಅವರು ಬಳಸಲಾರಂಭಿಸಿದರು. ಕಳೆದ ತಿಂಗಳಲ್ಲಿ ರೋಮ್‌ಗೆ ಅಮೇರಿಕನ್ ವಿದೇಶಾಂಗ ಉಪಕಾರ್ಯದರ್ಶಿ ಭೇಟಿಯಿತ್ತಾಗ ಇದರಬಂದು ನಿಜರೂಪ ಕಂಡು ಬಂತು. ವಾಶಿಂಗ್ಟನ್ ಮತ್ತು ರೋಮ್‌ನ ಸರಕಾರಗಳು ಪರಸ್ಪರ ಒಪ್ಪಂದ ಮಾಡಿಕೊಳ್ಳದಿದ್ದರೆ ಇಟಾಲಿಯನ್ ಕಂಪೆನಿಗಳಿಗೆ "ತಾರಾಯುದ್ಧ" ಯೋಜನೆಯಲ್ಲಿ ಕಾಂಟ್ರಾಕ್ಟುಗಳು ಸಿಗಲಿಕ್ಕಿಲ್ಲ ಎಂದು ಆ ಉಪಕಾರ್ಯದರ್ಶಿ ಪರೋಕ್ಷವಾಗಿ ಎಚ್ಚರಿಕೆ ನೀಡಿದರು. ಈ ಎಚ್ಚರಿಕೆಗೆ ಅಮೇರಿಕಾ ನಿರೀಕ್ಷಿಸಿದ ಫಲ ಈಗ ದೊರೆತಂತಾಗಿದೆ. ವಾಶಿಂಗ್ಟನ್ ಭೇಟಿಯಿಂದ ಹಿಂತಿರುಗಿದ ಇಟಾಲಿಯನ್ ವಿದೇಶ ಮಂತ್ರಿ "ತಾರಾಯುದ್ಧ" ಯೋಜನೆಯನ್ನು ಸೇರಿಕೊಳ್ಳುವ ತನ್ನ ಸರಕಾರದ ರಾಜಕೀಯ ನಿರ್ಧಾರವನ್ನು ಸಾರಿದ್ದಾರೆ.

ಅಫೀಮು ಕಳ್ಳವ್ಯಾಪಾರಿಗಳೂ 'ಸ್ವಾತಂತ್ರ್ಯವೀರರೇ'?

ಅಮೇರಿಕನ್ ನಗರಗಳಲ್ಲಿ ಅಫೀಮಿಗಿಂತ ತೀವ್ರವಾದ ಒಂದು ಹೊಸ ಪದಾರ್ಥದ ಹಾವಳಿ ಹೆಚ್ಚಾಗಿದೆ ಎಂದು ವರದಿಯಾಗಿದೆ. ಕ್ರೇಕ್ ಎನ್ನುವುದು ಈ ಮಾದಕ ಪದಾರ್ಥದ ಹೆಸರು. ಡಾಕ್ಟರುಗಳ ಪ್ರಕಾರ ಇತ್ತೀಚಿಗಿನ ಗಂಭೀರ ಕೇಸುಗಳಲ್ಲಿ ಅರ್ಧದಷ್ಟು ಕ್ರೇಕ್ ಸೇದುವವರು. ಇದನ್ನು ಅಲ್ಪ ಪ್ರಮಾಣದಲ್ಲಿ ಸೇದಿದರೂ ಕೂಡ ಭಯಾನಕ ದುಷ್ಪರಿಣಾಮಗಳಾಗುತ್ತಿರುವುದು ಕಂಡುಬಂದಿದೆ.

ಶೇ. 90 ಕೋಕೇನ್ ಒಳಗೊಂಡಿರುವ ಈ ಪದಾರ್ಥ ಈಗ ಅಮೇರಿಕನ್ ಕಾಳಸಂತೆಯಲ್ಲಿ ತುಂಬಿಹೋಗಿದೆ. ಈ ಕೋಕೇನ್ ಎಲ್ಲಿಂದ ಬರುತ್ತಿದೆ ಗೊತ್ತೆ? ರೇಗನ್ ಸರಕಾರ 'ಸ್ವಾತಂತ್ರ್ಯ ವೀರರೆಂದು" ಹಾಡಿ ಹೊಗಳುತ್ತಿರುವ ಸಾವಿರಾರು ಕೋಟಿ ರೂ. ನೆರವು ನೀಡಿ ಕೊಬ್ಬಿಸುತ್ತಿರುವ, ಕ್ರಾಂತಿಕಾರಿ ನಿಕರಾಗುವಾದ ಶತ್ರುಗಳು - ಕಾಂಟ್ರಾ ಎಂಬ ಹೆಸರಿನ ದಂಗೆಕೋರರು ಇದರ ಮೂಲ!

ಈ ಕಾಂಟ್ರಾಗಳು ಈ ವ್ಯಾಪಾರದಲ್ಲಿ ಅಪಾರ ಹಣ ಗಳಿಸುತ್ತಿದ್ದಾರೆ ಎಂದು ಎ. ಬಿ. ಸಿ. ಟೆಲಿವಿಶನ್ ಸಂಸ್ಥೆ ಹೇಳಿದೆ. ಅಲ್ಲದೆ ಉಳಿದ ಅಫೀಮು ವ್ಯಾಪಾರಿಗಳು ಎದುರಿಸಬೇಕಾದ ಕಾನೂನಿನ ಭಯವೂ ಇವರಿಗಿಲ್ಲ ಉದಾಹರಣೆಗೆ- ಕ್ಯಾಲಿಫೋರ್ನಿಯದಲ್ಲಿ ಇಬ್ಬರು ಕಾಂಟ್ರಾಗಳು 1000 ಕೋಟಿ ಡಾಲರುಗಳ ಮೌಲ್ಯದ ಕೊಕೇನ್ ಕಳ್ಳ ವ್ಯಾಪಾರದಲ್ಲಿ ತೊಡಗಿದ್ದಾಗ ಸಿಕ್ಕಿ ಬಿದ್ದರು. ಅವರಿಂದ 36 ಸಾವಿರ ಡಾಲರುಗಳನ್ನು ವಶಪಡಿಸಿಕೊಳ್ಳಲಾಯಿತು. ಆದರೆ ನ್ಯಾಯಾಲಯದ ತೀರ್ಪನ್ನು ಕೂಡ ಉಲ್ಲಂಘಿಸಿ ಅದನ್ನು ಅವರಿಗೆ ಹಿಂದಿರುಗಿಸಲಾಯಿತು. ಯಾಕೆಂದರೆ ಈ ಮಾದಕದ ಮಾರಾಟದ ಹಣ ನಿಕಾರಗುವಾದ ವಿರುದ್ಧ ಕಾರ್ಯಾಚರಣೆಗೆ ಬಳಕೆಯಾಗುತ್ತದೆ ಎಂದು ಹೇಳುವ ಕಾಂಟ್ರಾ ಮುಖಂಡರ ಪತ್ರವನ್ನು ಅವರಿಬ್ಬರು ತೋರಿಸಿದರಂತೆ!

ರೇಗನ್ ಆಡಳಿತಕ್ಕೆ ಪ್ರಿಯವಾದ ಯಾವುದೇ ಕೆಲಸ ಮಾಡುವವರಿಗೆ ಅಮೇರಿಕನ್ ಜನತೆಯ ಆರೋಗ್ಯವನ್ನು ನಾಶಪಡಿಸುವ ಸೌಲಭ್ಯ ಕೂಡ ಇದೆಯೆಂದು ಇದರಿಂದ ಸ್ಪಷ್ಟವಾಗುತ್ತದೆ.

ಇದಕ್ಕೆ ಇನ್ನೊಂದು ಉದಾಹರಣೆ: ಅಫ್ಘಾನ್ ಕ್ರಾಂತಿಯ ಶತ್ರುಗಳು "ಸಾನ್‌ಫ್ರಾನ್ಸಿಸ್ಕೋ ಕ್ರಾನಿಕಲ್" ಎಂಬ ಪತ್ರಿಕೆಗೆ ನೀಡಿದ ಸಂದರ್ಶನವೊಂದರಲ್ಲಿ ಅಮೇರಿಕನ್ ಮಾದಕ ದ್ರವ್ಯ ನಿಯಂತ್ರಣ ಇಲಾಖೆಯ ಉಚ್ಚ ಅಧಿಕಾರಿಯೊಬ್ಬರು ಗುಪ್ತ ಅಫೀಮು ವ್ಯಾಪಾರಿಗಳು ಹಾಗೂ ಅಫಘಾನ್ ದೇಶದ ವಿರುದ್ಧ ಕ್ರಾಂತಿ ವಿರೋಧಿಗಳನ್ನು ಪ್ರತ್ಯೇಕಿಸುವುದೇ ಕಷ್ಟವಾಗಿದೆ ಎಂದಿದ್ದಾರೆ. ಇದಕ್ಕೆ ಕಾರಣ ಏನು ಎಂಬುದು ಬಹುಶಃ ಆ ಅಧಿಕಾರಿಗೆ ಸಂಬಂಧಪಟ್ಟ ವಿಷಯವಲ್ಲ ಅಫಘಾನಿಸ್ತಾನದ 1978ರ ಏಪ್ರಿಲ್ ಕ್ರಾಂತಿ ಅಂದಿನಿಂದ ಕ್ರಾಂತಿ ವಿರೋಧಿಗಳು ಪಾಕಿಸ್ತಾನದ ಮೂಲಕ ಅಫೀಮು ವ್ಯಾಪಾರದಲ್ಲಿ ತೊಡಗಿದ್ದಾರೆ. ಅಫೀಮು ಹಾಗೂ ಹಶೀಶ್‌ಗಳನ್ನು ಅಮೇರಿಕಾ ತಲುಪಿಸಲು ಸಿ.ಐ.ಎ ಅವರಿಗೆ ವ್ಯವಸ್ಥೆ ಮಾಡಿಕೊಟ್ಟಿದೆ. ಈ ಕಳ್ಳ ವ್ಯಾಪಾರದ ಹಣ ಅಫಘಾನಿಸ್ತಾನದ ವಿರುದ್ಧ ಅಘೋಷಿತ ಯುದ್ಧ ನಡೆಸುವುದರಲ್ಲಿ ಬಳಕೆಯಾಗುತ್ತಿದೆ ಎಂದು ಡೇನಿಷ್ ಪತ್ರಕರ್ತ ಹೆನ್ರಿಕ್ ಕ್ರೂಗರ್ ಹೇಳಿದ್ದಾರೆ.

ಈ ಹಿನ್ನೆಲೆಯಲ್ಲಿ ಮಾದಕ ಪದಾರ್ಥ ಅಂತರಾಷ್ಟ್ರೀಯ ಸ್ಮಗ್ಲಿಂಗ್‌ನ ವಿರುದ್ಧ ಕಾರ್ಯಾಚರಣೆ ನಡೆಸಲು ತಮ್ಮ ಸೇನೆಗಳಿಗೆ ಆಜ್ಞಾಪಿಸಿರುವುದಾಗಿ ಹೇಳಿರುವ ರೇಗನ್‌ರ ಘೋಷಣೆ ಎಷ್ಟು ಪೊಳ್ಳಾದದ್ದು ಎಂಬುದು ತಿಳಿಯುತ್ತದೆ.

ಬ್ರಿಟನ್ನಿನಲ್ಲಿ ಬಡತನ

ಕಳೆದ ಶುಕ್ರವಾರ ಪ್ರಕಟಿಸಲ್ಪಟ್ಟ ಅಧಿಕೃತ ಅಂಕೆ-ಸಂಖ್ಯೆಗಳ ಪ್ರಕಾರ ಪ್ರತಿ ಮೂವರು ಬ್ರಿಟನ್ ವಾಸಿಗಳಲ್ಲಿ ಒಬ್ಬ ಬಡತನದ ರೇಖೆಯ ಕೆಳಗೆ ಅಥವಾ ಅದರ ಆಸುಪಾಸಿನಲ್ಲಿ ಜೀವಿಸುತ್ತಿದ್ದಾನೆ. 1979 ರಲ್ಲಿ ಬ್ರಿಟನ್ನಿನ ಬಡವರ ಸಂಖ್ಯೆ 1 ಕೋಟಿ 15 ಲಕ್ಷವಿದ್ದದ್ದು 1983 ರಲ್ಲಿ 1 ಕೋಟಿ 63 ಲಕ್ಷಕ್ಕೇರಿದೆಯೆಂದು ಆರೋಗ್ಯ ಹಾಗೂ ಸಾಮಾಜಿಕ ಭದ್ರತಾ ಇಲಾಖೆಯ ಈ ಅಂಕಿ-ಅಂಶಗಳಿಂದ ವ್ಯಕ್ತಗೊಂಡಿದೆ.

ಕೆರೇಬಿಯನ್‌ನಲ್ಲಿ ಮತ್ತೆ ಹೊಸಗಾಳಿ

ಬಾರ್ಬಡೊಸ್ ದಕ್ಷಿಣ ಅಮೇರಿಕಾ ಖಂಡದ ಉತ್ತರದಲ್ಲಿರುವ ಕೆರೇಬೀಯನ್ ಸಮುದ್ರದಲ್ಲಿರುವ ದ್ವೀಪಮಯವಾದ ಕೇವಲ 3 ಲಕ್ಷ ಜನಸಂಖ್ಯೆಯ ಪುಟ್ಟ ದೇಶ 1966 ರಲ್ಲಿ ರಾಜಕೀಯ ಸ್ವಾತಂತ್ರ್ಯ ಪಡೆದರೂ ಅದರ ಬಗ್ಗೆ ಜಗತ್ತು ಕೇಳಿದ್ದು 1983 ರಲ್ಲಷ್ಟೆ ಅಮೇರಿಕನ್ ಸೇನೆಗಳು ಪ್ರಗತಿಪರ ಗ್ರೆನಡಾದೊಳಗೆ ಅತಿಕ್ರಮಣ ನಡೆಸಿದಾಗ ಬಾರ್ಬಡೊಸ್‌ನ ಆಗಿನ ಅಮೇರಿಕನ್ ಕೈಗೊಂಬೆ ಆಳರಸರು ಈ ನೀಚ ಆಕ್ರಮಣಕ್ಕೆ ತಮ್ಮ ದೇಶವನ್ನು ಯುದ್ಧ ತಯಾರಿಯ ತಾಣವಾಗಿ ಉಪಯೋಗಿಸಲು ಅವಕಾಶ ನೀಡಿದ್ದರು.

ಈಗ ಈ ಬಾರ್ಬಡೊಸ್ ಮತ್ತೆ ಸುದ್ದಿಯಲ್ಲಿದೆ. ಅಮೇರಿಕನ್ ಆಕ್ರಮಣಗಾರರಿಗೆ ಆಶ್ರಯ ನೀಡಿದ್ದ ಸರಕಾರವನ್ನು ನಡೆಸುತ್ತಿದ್ದ ಪಕ್ಷ ಮೇ ತಿಂಗಳಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಸಂಪೂರ್ಣವಾಗಿ ಪರಾಭವಗೊಂಡಿದೆ. ವಿರೋಧಿ ಡೆಮಾಕ್ರೆಟಿಕ್ ಲೇಬರ್ ಪಾರ್ಟಿ 27ರಲ್ಲಿ 24 ಸ್ಥಾನ ಗೆದ್ದುಕೊಂಡಿದೆ. ಅಮೇರಿಕಾದ ಆಳುವ ವಲಯಗಳ ಬಾಲ ಹಿಡಿದು ಐ ಎಮ್. ಎಫ್. ಶರತ್ತುಗಳಿಗನುಸಾರವಾಗಿ ಕುಣಿದು ದೇಶದ ಆರ್ಥಿಕತೆಯನ್ನು ಅಧೋಗತಿಗೆ ತಂದಿದ್ದು ಬಾರ್ಬಡೋಸ್ ಲೇಬರ್ ಪಾರ್ಟಿಗೆ ಬಾರ್ಬಡೋಸ್ ಜನತೆ ಸರಿಯಾದ ಪಾಠ ಕಲಿಸಿದ್ದಾರೆ.

ಹೊಸ ಪ್ರಧಾನಿ ಎರೋಲ್ ಬಾರೋ ವಾಶಿಂಗ್ಟನ್‌ನಿಂದ ಸ್ವತಂತ್ರ್ಯವಾದ ವಿದೇಶಿ ಧೋರಣೆಯನ್ನು ಅನುಸರಿಸುವುದಾಗಿ ಘೋಷಿಸಿದ್ದಾರೆ. ಅಮೇರಿಕಾದ ಬಾಲ ಹಿಡಿಯುತ್ತಿರುವ ಜಮೈಕಾ, ಡೊಮಿನಿಕಾ ಮುಂತಾದ

8ನೇ ಪುಟ ನೋಡಿ

ರಾಜ್ಯ ಸಮಿತಿ ನಿರ್ಣಯಗಳು

ಜುಲೈ 29-30 ರಂದು ಸೇರಿದ ಸಿ ಪಿ ಐ (ಎಂ) ಕರ್ನಾಟಕ ರಾಜ್ಯ ಸಮಿತಿ ರಾಮನಗರ, ಚನ್ನಪಟ್ಟಣ ಮತ್ತು ಅದರ ಸುತ್ತಮುತ್ತ ನಡೆದ ಗಲಭೆಗಳ ಕುರಿತು, ಹಾಗೆಯೇ ಅದರಿಂದಾಗಿ ಖಾಸಗಿ-ಸರಕಾರಿ ಆಸ್ತಿಗಳಿಗಾದ ಹಾನಿ, ನಿರಪರಾಧಿ ಜನರ ಮೇಲಾದ ದಬ್ಬಾಳಿಕೆ, ಗೂಂಡಾ ಜನರಿಂದಾದ ಕೊಲೆ, ಪೋಲೀಸ್ ಗೋಲಿಬಾರಿನಿಂದಾಗ ಜೀವ ಹಾನಿಗೆ ತನ್ನ ಅತ್ಯಂತ ಗಂಭೀರ ಚಿಂತನೆ ವ್ಯಕ್ತಪಡಿಸಿದೆ. ದೇಶಕ್ಕೆ ಸ್ವಾತಂತ್ರ್ಯ ದೊರೆತು 40 ವರ್ಷಗಳ ನಂತರ ಕೂಡ ಹಿಂದೂ - ಮುಸ್ಲಿಂ ಜಾತೀಯ ವಾದಿಗಳು ಕ್ಷುಲ್ಲಕ ಕಾರಣಗಳಿಗಾಗಿ ಜನರನ್ನು ಉದ್ರೇಕಿಸಿ ಜಾತೀಯ ಗಲಭೆ ಉಂಟು ಮಾಡುವುದನ್ನು ಸಿ ಪಿ ಐ [ಎಂ] ಖಂಡಿಸಿದೆ. ಆದಂಗೆಯಲ್ಲಿ ಮರಣ ಹೊಂದಿದವರಿಗೆ ಸಂತಾಪ ಸೂಚಿಸಿ, ಜಾತೀವಾದಿಗಳ ಪ್ರಚಾರಕ್ಕೆ ಬಲಿಯಾಗಬಾರದೆಂದು ಜನರಿಗೆ ಕರೆ ನೀಡಿದೆ.

ಅಮೇರಿಕನ್ ಸಾಮ್ರಾಜ್ಯಶಾಹಿಗಳ ಬೆಂಬಲದಿಂದ ಭಾರತ ದೇಶದಲ್ಲಿ ಮತೀಯ,ಛಿದ್ರಕಾರಿ ಶಕ್ತಿಗಳು ನಡೆಸುತ್ತಿರುವ ಭಯೋತ್ಪಾದಕ ಚಟುವಟಿಕೆ, ಜಾತೀಯ ದಂಗೆ, ಭಾಷಾ ಪ್ರಶ್ನೆಗಳೂ ಜಗಳಗಳ ವಿರುದ್ಧ ಆಗಸ್ಟ 9 ರಿಂದ ಒಂದು ವಾರ ರಾಷ್ಟ್ರೀಯ ಭಾವೈಕ್ಯತಾ ದಿನಾಚರಣೆ ಆಚರಿಸಿ ದೇಶದ ಐಕ್ಯತೆ-ಸಮಗ್ರತೆ ಕುರಿತು ಜನರಲ್ಲಿ ಜಾಗೃತಿ ಉಂಟು ಮಾಡಿ ಸಾಮ್ರಾಜ್ಯಶಾಹಿಗಳ, ಪಂಥವಾದಿಗಳ ವಿರುದ್ಧ ಹೋರಾಡಿ ದೇಶದ ಸಮಗ್ರತೆ ಕಾಪಾಡಬೇಕೆಂದು ಪಾರ್ಟಿ ಘಟಕಗಳಿಗೆ ಕರೆ ನೀಡಿತು.

ಪ್ರತಿಯೊಬ್ಬ ನಾಗರೀಕನೂ ತನ್ನ ಮಾತೃ ಭಾಷೆಯಲ್ಲೇ ಶಿಕ್ಷಣ ಪಡೆಯುವ ಹಕ್ಕಿದೆಂದೂ, ಯಾವ ಸರ್ಕಾರವೂ ಆ ಹಕ್ಕನ್ನು ಮೊಟಕುಗೊಳಿಸದೆ, ಕರ್ನಾಟಕದಲ್ಲಿ ಎಲ್ಲ ಅಲ್ಪ ಭಾಷಿತ ಮಕ್ಕಳಿಗೆ ಅವರವರ ಭಾಷೆಯಲ್ಲೇ ಉಚ್ಚಮಟ್ಟದವರೆಗೂ ಶಿಕ್ಷಣ ಪಡೆಯುವ ಅವಕಾಶ ಮಾಡಿ ಕೊಡಬೇಕಲ್ಲದೆ ಕನ್ನಡವನ್ನು ಯಾವ ಹಂತದಲ್ಲಿಯೂ ಕಡ್ಡಾಯ ಗೊಳಿಸುವುದು ಸಮಂಜಸವಲ್ಲೆಂದೂ, ಸರಕಾರಿ ನೌಕರಿ ಅಪೇಕ್ಷಿಸುವವರು ಮಾತ್ರ ಕನ್ನಡ ಕಲಿಯಲೇ ಬೇಕೆಂದು ಒತ್ತಾಯಿಸುವುದು ಸರಿಯೆಂದು ರಾಜ್ಯ ಸಮಿತಿ ಅಭಿಪ್ರಾಯ ವ್ಯಕ್ತ ಮಾಡಿದೆ.

ಆಗಸ್ಟ್ 8 ರಂದು ಸಾಮೂಹಿಕ ಧರಣಿ

(1ನೇ ಪುಟದಿಂದ)

ನಿಷೇಧವನ್ನು ತೆಗೆದು ಹಾಕಬೇಕು; ಮುಚ್ಚಿರುವ ಕಾರ್ಖಾನೆಗಳನ್ನು ತೆರೆಯಬೇಕು ಮತ್ತು ಕಾರ್ಖಾನೆಗಳನ್ನು ಮುಚ್ಚುವುದನ್ನು ನಿಷೇಧಿಸಬೇಕು; ಕೆಲಸ ಕೊಡುವುದರಲ್ಲಿ ಉದ್ಯೋಗ ವಿನಿಮಯ ಕಛೇರಿಯಲ್ಲಿ ನಡೆಯುವ ಮೋಸ, ಮಂತ್ರಿ ಮಾಗಧರ ಮತ್ತು ಹಿರಿಯ ಅಧಿಕಾರಿಗಳ ಹಂತದಲ್ಲಿ ಲಂಚ ತೆಗೆದುಕೊಂಡು ಕೆಲಸ ಕೊಡುವುದು. ನೆಂಟರಿಷ್ಟರಿಗೆ ಬೇಕಾದವರಿಗೆ ಕೆಲಸ ಕೊಡುವುದು ನಿಲ್ಲಬೇಕು.

ಸಿ ಐ. ಟಿ ಯು. ಗೆ ಸೇರಿರುವ ಕಾರ್ಮಿಕ ಸಂಘಗಳು ಕಾರ್ಯಕಾರಿ ಸಮಿತಿಗಳ ಸಭೆಗಳನ್ನು ಕರೆದು ನಿರುದ್ಯೋಗಿಗಳನ್ನು ಸಂಘಟಿಸುವ ಮತ್ತು ಚಳುವಳಿಗೆ ಸಿದ್ಧತೆಗಳನ್ನು ಮಾಡುವ ಜವಾಬ್ದಾರಿಯನ್ನು ಕಾರ್ಯಕಾರಿ ಸಮಿತಿಯ ಇಬ್ಬರು ಸದಸ್ಯರಿಗೆ ವಹಿಸಬೇಕು. ಇವರು ಮನೆಮನೆಗೆ ಹೋಗಿ ನಿರುದ್ಯೋಗಿಗಳ ಪರಿಚಯ ಮಾಡಿಕೊಂಡು, ನಿರುದ್ಯೋಗ ವಿರುದ್ಧ ಸಂಘಟಿಸುವ ಸಮಾವೇಶಗಳಿಗೆ ಮತ್ತು ಆಗಸ್ಟ್ 8 ರಂದು ನಡೆಯುವ ಸಾಮೂಹಿಕ ಧರಣಿಯಲ್ಲಿ ಭಾಗವಹಿಸುವಂತೆ ಮಾಡಬೇಕು.

ಇಂದು ನಮ್ಮ ದೇಶದಲ್ಲಿ ಸಂಘಟಿತ ಕಾರ್ಮಿಕರು ಸುಮಾರು ಎರಡು ಕೋಟಿ ಇರಬಹುದಷ್ಟೆ ಆದರೆ ಪೇಟೆ ಮತ್ತು ಹಳ್ಳಿಗಳಲ್ಲಿರುವ ನಿರುದ್ಯೋಗಿಗಳು ಹತ್ತು ಕೋಟಿಯಷ್ಟಿದ್ದಾರೆ. ಇವರಲ್ಲದೆ ಕೇಂದ್ರ ಸರ್ಕಾರದ ದಿವಾಳಿಕೋರ ಕೈಗಾರಿಕಾ ಮತ್ತು ಆರ್ಥಿಕ ನೀತಿಗಳಿಂದಾಗಿ, ರಾಜೀವಗಾಂಧಿ ಸರ್ಕಾರದ ಹೊಸ ಜವಳಿ ನೀತಿಯಿಂದಾಗಿ, ಬಂಡವಾಳಗಾರರ ಮೋಸದಿಂದಾಗಿ, 400 ದೊಡ್ಡ ಕೈಗಾರಿಕಾ ಘಟಕಗಳು, ಒಂದು ಲಕ್ಷ ಸಣ್ಣ ಮತ್ತು ಮಧ್ಯಮ ಕಾರ್ಖಾನೆಗಳೂ ಮುಚ್ಚಿ ಹೋಗಿದ್ದು ಅಲ್ಲಿ ಕೆಲಸ ಕಳೆದುಕೊಂಡಿರುವ ಅನೇಕ ಲಕ್ಷ ಕಾರ್ಮಿಕರು ಇಂದು ನಿರುದ್ಯೋಗಿಗಳ ಸಾಲನ್ನು ಸೇರಿದ್ದಾರೆ.

ಇವರನ್ನು ಪ್ರತಿಗಾಮಿಗಳು, ಬಂಡವಾಳಗಾರರು, ಛಿದ್ರಕಾರಿಗಳು ಸುಲಭವಾಗಿ ಸಂಘಟಿತ ಕಾರ್ಮಿಕರ ವಿರುದ್ಧ ಎತ್ತಿ ಕಟ್ಟುತ್ತಾರೆ ಅವರಿಗೆಲ್ಲಾ ಹೆಚ್ಚು ಕೂಲಿ. ಸಂಬಳಗಳಿರುವುದರಿಂದಲೇ ನಿಮಗೆ ಉದ್ಯೋಗ ಸಿಕ್ಕುತ್ತಿಲ್ಲ ಎಂದು ತಪ್ಪು ಹಾದಿಗೆ ಎಳೆಯುತ್ತಾರೆ. ಕಾರ್ಮಿಕರ ಮುಷ್ಕರ, ಹೋರಾಟಗಳು ನಡೆಯುವಾಗ ಅವುಗಳ ಮೇಲೆ ಆಕ್ರಮಣ ನಡೆಸಲು ನಿರುದ್ಯೋಗಿ ಯುವಕರನ್ನು ಗೂಂಡಾಗಳನ್ನಾಗಿ ಉಪಯೋಗಿಸುತ್ತಾರೆ.

ಕಾಂಗ್ರೆಸ್ ಸರ್ಕಾರವು ಅನುಸರಿಸುತ್ತಾ ಬಂದಿರುವ ಬೆಳವಣಿಗೆಯ ಬಂಡವಾಳಶಾಹಿ ಪಥದಿಂದಾಗಿ ಆರು ಪಂಚವಾರ್ಷಿಕ ಯೋಜನೆಗಳು ಕಳೆದರೂ, ಪಂಚವಾರ್ಷಿಕ ಯೋಜನೆಗಳ ಉದ್ದೇಶ ಉದ್ಯೋಗವನ್ನು ಒದಗಿಸುವುದು ಮತ್ತು ನಿರುದ್ಯೋಗ ಸಮಸ್ಯೆಯನ್ನು ಪರಿಹಾರ ಮಾಡುವುದು ಆಗಿದ್ದರೂ ಸಹ ಮೊದಲನೆಯ ಪಂಚವಾರ್ಷಿಕ ಯೋಜನೆಮುಕ್ತಾಯವಾಗುವಾಗ ಪೇಟೆ ಪಟ್ಟಣಗಳಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೆಸರುಗಳನ್ನು ನೊಂದಾಯಿಸಿಕೊಂಡವರ ಸಂಖ್ಯೆ 53 ಲಕ್ಷವಿದ್ದುದು ಇಂದು ಮೂರು ಕೋಟಿಗೆ ಏರಿದೆ.

ಬಂಡವಾಳಗಾರರ ಉದ್ದೇಶ ಕೇವಲ ಲಾಭಗಳಿಸುವುದಾಗಿದೆ. ನಿರುದ್ಯೋಗಿಗಳ ಸೇನೆ ಸದಾನಿಂತಿರಬೇಕು. ಆಗ ಮಾತ್ರ ಅವರ ಸಂಸ್ಥೆಗಳಲ್ಲಿ ದುಡಿಯುವ ಕಾರ್ಮಿಕರನ್ನು ಕಡಿಮೆ ಕೂಲಿಗೆ ಕೆಲಸ ಮಾಡಿಸಲು ಸಾಧ್ಯ

ಭಾರತದ ಟ್ರೇಡ್ ಯೂನಿಯನ್ ಚಳುವಳಿ ಇತಿಹಾಸದಿಂದ ಪಾಠಗಳನ್ನು ಕಲಿತಿಲ್ಲ ಕಾರ್ಮಿಕರನ್ನು ತುಟ್ಟಿ ಭತ್ತೆ, ಬೋನಸ್, ಸಂಕುಚಿತವಾದ ಆರ್ಥಿಕವಾದ ಚೌಕಟ್ಟಿನಲ್ಲಿ ಬೆಳೆಸಿಕೊಂಡು ಬರಲಾಗಿದೆ. ಅವರ ಪ್ರಜ್ಞೆ ಕಾರ್ಖಾನೆ ಮಟ್ಟದ ಪ್ರಜ್ಞೆಯ ಮಟ್ಟದಲ್ಲಿರುವಂತೆ ನೋಡಿಕೊಳ್ಳಲಾಗಿದೆ.

ಕೆಲಸಮಾಡಲು ಸಿದ್ಧರಿರುವ ಯುವಕರು ಕಾರ್ಮಿಕ ವರ್ಗದ ಒಂದು ಭಾಗ ಎಂಬ ತಿಳುವಳಿಕೆ ನಮ್ಮ ಕಾರ್ಮಿಕ ಮುಖಂಡರಿಗೇನೇ ಇಲ್ಲದಿರುವುದು, ಕಾರ್ಮಿಕ ವರ್ಗದ ಚಳುವಳಿ ಬಹಳ ವಿಶಾಲವಾದುದು, ಈ ವರೆವಿಗೆ ಕೆಲಸದಲ್ಲಿರುವ ಕಾರ್ಮಿಕರ ಬೇಡಿಕೆಗಳಿಗೆ ಮಾತ್ರ ಹೋರಾಡುತ್ತಾ ಬಂದಿರುವ ಕಾರ್ಮಿಕ ಸಂಘಗಳು ತಮ್ಮ ಪರಿಪಾಠವನ್ನು ಇನ್ನಾದರೂ ಬದಲಿಸಿ ನಿರುದ್ಯೋಗಿಗಳ ಬೇಡಿಕೆಗಳಿಗೆ ಹೋರಾಡಬೇಕಾಗಿದೆ. ಈ ವಿಷಯದಲ್ಲಿ ಸಿ.ಐ.ಟಿ ಯು. ಇತರ ಕಾರ್ಮಿಕ ಸಂಘಗಳಿಗೆ ಮಾರ್ಗದರ್ಶಿಯಾಗಬೇಕಾಗಿದೆ.

ಸಂಘಟಿತ ಕಾರ್ಮಿಕರು ತಮ್ಮ ನಿರುದ್ಯೋಗಿ ಸೋದರ, ಸೋದರಿಯರನ್ನು ಕರೆತಂದು 8-8-1986 ರಂದು ಉದ್ಯೋಗ ವಿನಿಮಯ ಕೇಂದ್ರಗಳ ಮುಂದೆ ಸಾಮೂಹಿಕ ಧರಣಿ ನಡೆಸಿ, ಈ ಅಭ್ಯಾಸವುಮುಂದಿನ ಹೋರಾಟಕ್ಕೆ ನಾಂದಿಯಾಗುವಂತೆ ಮಾಡಲೆಂದು ಹಾರೈಸುತ್ತೇವೆ.

ಕೋಮು ಗಲಭೆಗಳ ಹಿಂದೆ ಸಾಮ್ರಾಜ್ಯಶಾಹಿ ಪಿತೂರಿ

(ಒಂದನೇ ಪುಟದಿಂದ)

ಕಾಂಗ್ರೆಸ್ (ಐ) ಸರಕಾರ ಶರಣಾಗಿರುವುದು ಸಿಖ್ ಮೂಲಭೂತವಾದಿಗಳಿಗೆ ಮಾತ್ರವಲ್ಲ. ಅದು ಹಿಂದೂ ಮತ್ತು ಮುಸ್ಲಿಂ ಹಾಗೂ ಇತರ ಧರ್ಮದ ಕೋಮುವಾದಿಗಳಿಗೂ ಶರಣಾಗುತ್ತಿದೆ.

ವಾಸ್ತವವಾಗಿ ಹೇಳಬೇಕೆಂದರೆ ಎಲ್ಲ ಜಾತಿಮತ ಧರ್ಮಗಳ ಕೋಮುವಾದಿಗಳನ್ನೂ ಮೂಲಭೂತವಾದಿಗಳನ್ನೂ ಓಲೈಸಿಕೊಳ್ಳುವುದರಲ್ಲಿ ಬಂಡವಾಳಶಾಹಿ ವಿರೋಧ ಪಕ್ಷಗಳು ಕಾಂಗ್ರೆಸ್ (ಐ)ಗಿಂತ ತುಸುವೂ ಹಿಂದೆ ಬಿದ್ದಿಲ್ಲ. "ನೀವು ಸ್ವಲ್ಪವೇ ಎಚ್ಚರ ತಪ್ಪಿದರೂ ಸಾಕು, ಮುಂದಿನ ವಿಧಾನಸಭಾ ಚುನಾವಣೆಗಳಲ್ಲಿ ಕರ್ನಾಟಕದ ಮಂತ್ರಿ ಮಂಡಲದಲ್ಲಿ ಮಠಾಧಿಪತಿಗಳು ಮತ್ತು ಸ್ವಾಮಿಗಳೇ ತುಂಬಿಕೊಂಡರೂ ಆಶ್ಚರ್ಯಪಡಬೇಕಾಗಿಲ್ಲ" ಎಂದರು ಕಾ. ಬಿ ಟಿ. ಆರ್. "ನಮ್ಮ ಪಕ್ಷದ ಪಾಲಿಗೆ ಜಾತ್ಯತೀತತೆಯೆಂದರೆ ಧರ್ಮವನ್ನು ರಾಜಕೀಯದಿಂದ ಬೇರ್ಪಡಿಸುವುದೆಂದರ್ಥ. ಧರ್ಮವು ಜನತೆಯ ವೈಯಕ್ತಿಕ ವಿಚಾರ. ನಾವು ಜನರ ಮತ್ತು ದೇವರ ನಡುವೆ ಎಂದೂ ಬರುವುದಿಲ್ಲ. ಜನರು ದೈವದ ಜೊತೆ ಬೇಕಾದರೂ ಸಂಬಂಧವಿಟ್ಟುಕೊಳ್ಳಲಿ-ನಮ್ಮ ಅಭ್ಯಂತರ ಇಲ್ಲ. ಆದರೆ ದೇವರುಗಳ ಜೊತೆಗಿನ ಈ ಸಂಬಂಧ ಮನುಷ್ಯ ಮನುಷ್ಯರ ನಡುವಿನ ಸಾಮರಸ್ಯವನ್ನು ಕೆಡಿಸದಿರಲಿ. ಸಮಾಜದ ಸ್ವಾಸ್ಥ್ಯಕ್ಕೆ ಮತ್ತು ಪ್ರಗತಿಗೆ ದೇವರ ನಂಬಿಕೆ ಅಡ್ಡಿಬಾರದಿರಲಿ" ಎಂದು ಅವರು ಕಳಕಳಿಯಿಂದ ನುಡಿದರು.

ಸಾಮ್ರಾಜ್ಯ ಶಾಹಿ ಪಿತೂರಿ

ಇತ್ತೀಚೆಗ ರಾಜೀವ್ ಗಾಂಧಿ ಅಮೇರಿಕಾ ಸಾಮ್ರಾಜ್ಯ ಶಾಹಿಯೊಂದಿಗೆ ಒಂದು ಒಪ್ಪಂದ ಮಾಡಿಕೊಳ್ಳುವ ತಯಾರಿ ನಡೆದಿದೆ. ಈ ಒಪ್ಪಂದ ಏನು? ನಮ್ಮ ದೇಶದ ರಕ್ಷಣಾ ವ್ಯವಸ್ಥೆಯ ಮೇಲ್ವಿಚಾರಣೆ ಮತ್ತು ಆಧುನೀಕರಣದ ಹೊಣೆಗಾರಿಕೆಯನ್ನು ಅಮೇರಿಕ ಸಂಯುಕ್ತ ಸಂಸ್ಥಾನಕ್ಕೆ ಒಪ್ಪಿಸುವ ಮತ್ತು ನಮಗೆ ಬೇಕಾಗಿರುವ ಲಘು ಯುದ್ಧ ವಿಮಾನಗಳ ತಂತ್ರಜ್ಞಾನವನ್ನು ನಮಗೆ ಒದಗಿಸುವ ವಿಚಾರದಲ್ಲಿ ಒಪ್ಪಂದವಂತೆ!

ನಮ್ಮ ದೇಶದ ಮೇಲೆ ಆಕ್ರಮಣ ನಡೆಸುವುದಕ್ಕಾಗಿ ನಮ್ಮ ನೆರೆಯ ಪಾಕಿಸ್ತಾನಕ್ಕೆ ಅಮೇರಿಕಾ ಸಂಯುಕ್ತ ಸಂಸ್ಥಾನ ಅಜೀರ್ಣವಾಗುವಷ್ಟು ಮಾರಕ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡಿದೆ. ಪಾಕಿಸ್ಥಾನ ಅಮೇರಿಕಾ ನೀಡಿರುವ ಈ ನೆರವನ್ನು ಉಪಯೋಗಿಸಿಕೊಂಡು ಖಲಿಸ್ತಾನ್ ಭಯೋತ್ಪಾದಕರಿಗೆ ತನ್ನ ನೆಲದಲ್ಲಿ ತರಬೇತಿ ನೀಡುತ್ತಿದೆ. ಇಂತಹ ಅಮೇರಿಕದೊಂದಿಗೆ ನಮ್ಮ ಆಯಕಟ್ಟಿನ ಮತ್ತು ರಹಸ್ಯವಾದ ರಕ್ಷಣಾ ವ್ಯವಸ್ಥೆಯ ಮೇಲ್ವಿಚಾರಣೆ ನೋಡಿಕೊಳ್ಳುವಂತೆ ರಾಜೀವ್ ಗಾಂಧಿ ಒಪ್ಪಂದ ಮಾಡಿಕೊಳ್ಳಲಿದ್ದಾರೆ! "ಇದಕ್ಕಿಂತ ದೊಡ್ಡ ಆತ್ಮ ಘಾತುಕ ಕೃತ್ಯ ಬೇರೆ ಇದೆಯೆ?" ಎಂದು ಕಾಂ. ರಣದಿವೆ ಪ್ರಶ್ನಿಸಿದರು.

ದೇಶದ್ರೋಹಿಗಳಿಗೆ ಆಶ್ರಯನೀಡಿದ ಕರುಣಾಕರನ್ ಸರಕಾರ ನಾಚಿಕೆಯಿಲ್ಲದೆ ಇನ್ನೂ ಅಧಿಕಾರದಲ್ಲಿ ಮುಂದುವರಿಯುತ್ತಿದೆ. ಸಮಗ್ರತೆಯ ಬಗ್ಗೆ ರಾಜೀವ ಗಾಂಧಿ ಈ ಬಗ್ಗೆ ಚಕಾರವೆತ್ತುತ್ತಿಲ್ಲ, ದೇಶದ ಐಕ್ಯತೆ ಮತ್ತು ಸಮಗ್ರತೆಯ ಬಗ್ಗೆ ರಾಜೀವ್ ಗಾಂಧಿ ದೆಹಲಿಯಲ್ಲಿ ಭಾಷಣ ಮಾಡುತ್ತಾರೆ, ಆದರೆ ಕೇರಳದಲ್ಲಿ ರಾಷ್ಟ್ರೀಯ ಐಕ್ಯತೆ ಮತ್ತು ಸಮಗ್ರತೆಗಳಿಗೆ ರಜೆ ಸಾರಲಾಗಿದೆಯೇ? ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡುವ ಕೆಲಸವನ್ನು ರಾಜೀವ ಗಾಂಧಿ ಕೇರಳದಿಂದಲೇ ಯಾಕೆ ಪ್ರಾರಂಭಿಸುತ್ತಿಲ್ಲ? ರಾಜೀವ ಗಾಂಧಿಗೂ ಚುನಾವಣೆಯ ಪ್ರಶ್ನೆ ನೆನಪಿಗೆ ಬಂದಾಗ ದೇಶದ ಐಕ್ಯತೆಯ ಪ್ರಶ್ನೆ ಮರೆತು ಹೋಗುತ್ತದೆಯೆ"? ಎಂದು ತೀಕ್ಷ್ಣವಾಗಿ ಪ್ರಶ್ನಿಸಿದ ಬಿ. ಟಿ. ಆರ್. "ಇಂತಹ ಸನ್ನಿವೇಶದಲ್ಲಿ ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡಿಕೊಳ್ಳುವ ಹೊಣೆಗಾರಿಕೆ ಕಾರ್ಮಿಕ ವರ್ಗ ಮತ್ತು ಇತರ ದೇಶಪ್ರೇಮಿ ಜನತೆಯ ಮೇಲಿದೆ. ಹಳೆಯ ತಲೆಮಾರಿನ ಜನ ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ವಹಿಸಿದಂತಹ ಪಾತ್ರವನ್ನು ಇಂದಿನ ಜನಾಂಗ ವಹಿಸಬೇಕಾಗಿದೆ. ಕಾರ್ಮಿಕ ವರ್ಗವೊಂದೇ ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡಬಲ್ಲ ವರ್ಗ. ಕಾರ್ಮಿಕ ವರ್ಗ ಈ ದಿಸೆಯಲ್ಲಿ ಮುಂದಾಗಬೇಕು" ಎಂದು ಕರೆನೀಡಿದರು.

[7ನೇ ಪುಟದಿಂದ]

ಕೆರೇಬಿಯನ್ ದೇಶಗಳ ಸರಕಾರಗಳನ್ನು ಅವರು ಖಂಡಿಸಿದ್ದಾರೆ. ಅಲ್ಲದೆ ತಮ್ಮ ದ್ವೀಪದಲ್ಲಿ ಸಿ. ಐ. ಎ. ಏಜೆಂಟರ ಇರುವನ್ನು ಅವರು ಬಲವಾಗಿ ವಿರೋಧಿಸಿದ್ದಾರೆ. ಕೆರೇಬಿಯನ್ ಪ್ರದೇಶದಲ್ಲಿ "ಅತ್ಯಂತ ಅಮೇರಿಕದಬಾಲ" ಎಂದೆನಿಸಿಕೊಂಡಿದ್ದ ಈ ದೇಶದಲ್ಲಿ ಈ ರೀತಿಯ ಹೇಳಿಕೆ ಬಹಳ ಮಹತ್ವದ್ದು. ಗ್ರೆನಡಾವನ್ನು ಅಮೇರಿಕನ್ ನಾವಿಕ ಪಡೆಗಳು ಆಕ್ರಮಿಸಿಕೊಂಡ ಮೂರು ವರ್ಷಗಳ ನಂತರ ಕೆರೇಬಿಯನ್ ದ್ವೀಪಗಳಲ್ಲಿ ಮತ್ತೆ ಹೊಸ ಗಾಳಿ ಬೀಸಲಾರಂಭಿಸಿದಂತೆ ಕಾಣುತ್ತದೆ.

Printed & Published by P. Ramachandra Rao on behalf of the Communist Party of India [Marxist] Karnataka State Committee, K. V. Temple Street, Sultanpet, Bangalore-560053
Editorial and manageriel office: L-56, K. V. Temple Street, Sultanpet B-53 Phone : 75331
Editor P. Ramachandra Rao
Managing Editor : N K. Upadhyaya